ಕರ್ನಾಟಕ ಸರ್ಕಾರ Government of Karnataka
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
**Raichur Institute Of Medical Sciences, Raichur**
(ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)
ಹೈದ್ರಾಬಾದ್ ರೋಡ್, ರಾಯಚೂರು -584102 Hydrabad Road, Raichur -584102
Web. www.rims-raichur.com Phone/Fax-08532-238488/89 Email: info@rims-raichur.com

## ದಿನಾಂಕ 25.10.2017 ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ. 601, ಆರನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 13ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳು

### ಸಭೆಯಲ್ಲಿ ಹಾಜರಿದ್ದ ಸದಸ್ಯರು

1. ಶ್ರೀ. ಮಂಜುಲ, ಭಾ.ಆ.ಸೇ : ಅಧ್ಯಕ್ಷರು
   ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ), ಬೆಂಗಳೂರು

2. ಶ್ರೀ ಚಂದ್ರಶೇಖರ್, : ವಿಶೇಷ ಆಹ್ವಾನಿತರು
   ಸರ್ಕಾರದ ಉಪ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),
   ಬೆಂಗಳೂರು

3. ಡಾ. ಎಸ್. ಸಚ್ಚಿದಾನಂದ, : ಸದಸ್ಯರು
   ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
   ಬೆಂಗಳೂರು

4. ಶ್ರೀ ರಮೇಶ್. ಬಿ.ಹೆಚ್, : ಸದಸ್ಯರು
   ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು

5. ಡಾ. ಕವಿತಾ ಪಾಟೀಲ್, : ಸದಸ್ಯರು
   ನಿರ್ದೇಶಕರು,
   ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

6. ಡಾ. ಟಿ.ರೋಣಿ, : ಸದಸ್ಯರು
   ಮುಖ್ಯ ಆಡಳಿತಾಧಿಕಾರಿಗಳು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು

7. ಡಾ. ಸುರೇಶ್ ಸಗರದ್, : ಸದಸ್ಯರು
   ಪ್ರಭಾರಿ ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
   ರಾಯಚೂರು

ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ ಸಭೆ ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

Director
RIMS, Raichur

| ವಿಷಯ ಸೂಚಿ ಸಂಖ್ಯೆ – 01: | ದಿನಾಂಕ 03.08.2016 ರಂದು ಜರುಗಿದ ರಿಮ್ಸ್ ಸಂಸ್ಥೆಯ 12ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನ ವರದಿಯನ್ನು ಓದಿ ದಾಖಲಿಸುವ ಬಗ್ಗೆ |
|---|---|

ಸಭೆಯ ತೀರ್ಮಾನ :-

ದಿನಾಂಕ 03.08.2016 ರಂದು ಜರುಗಿದ ರಿಮ್ಸ್ ಸಂಸ್ಥೆಯ 12ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನ ವರದಿಯನ್ನು ಪರಿಶೀಲಿಸಿ, ಈ ಕೆಳಕಂಡ ಅಂಶಗಳೊಂದಿಗೆ ಅನುಮೋದಿಸಲಾಯಿತು.

1) ರಿಮ್ಸ್ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಸಲ್ಲಿಸುವ ವೇಳೆಯಲ್ಲಿ, ವಿಷಯ ಸೂಚಿವಾರು ಕೈಗೊಂಡ ಕ್ರಮಗಳ ಬಗ್ಗೆ ಈಗಾಗಲೇ ಕ್ರಮಗಳನ್ನು ಕೈಗೊಂಡಿದ್ದರೆ, ಅನುಪಾಲನ ವರದಿಯಲ್ಲಿ ಸ್ಪಷ್ಟವಾಗಿ ಮತ್ತು ನಿಖರವಾಗಿ ಸದ್ಯದ ಸ್ಥಿತಿಯನ್ನು ವಿವರಿಸುವುದು.

2) ಸರ್ಕಾರದಿಂದ ಒಂದು ಬಾರಿ ಯಾವುದೇ ಪೀಠೋಪಕರಣ, ಉಪಕರಣ, ಸಿವಿಲ್ ಕಾಮಗಾರಿಗಳು ಮತ್ತು ಇತರ ಟೆಂಡರ್‌ಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಸರ್ಕಾರದ / ಆರ್ಥಿಕ ಸಮಿತಿ / ಖರೀದಿ ಸಮಿತಿ / ಆಡಳಿತ ಮಂಡಳಿ ಸಭೆಯ ಅನುಮೋದನೆ ಪಡೆದು ಟೆಂಡರ್ ಆಹ್ವಾನಿಸಿದ್ದಲ್ಲಿ, ಟೆಂಡರ್‌ಗಳು ತಾಂತ್ರಿಕ ಕಾರಣಗಳಿಂದ ಮತ್ತು ಸಿಂಗಲ್ ಬಿಡ್‌ಗಳಿಂದ ರದ್ದುಗೊಂಡಿದ್ದಲ್ಲಿ ಪುನಃ ಸರ್ಕಾರದ / ಆರ್ಥಿಕ ಸಮಿತಿ / ಖರೀದಿ ಸಮಿತಿ / ಆಡಳಿತ ಮಂಡಳಿ ಸಭೆಯ ಅನುಮೋದನೆ ಪಡೆಯುವುದು ಅವಶ್ಯಕತೆಯಿರುವುದಿಲ್ಲ. ಬದಲಾಗಿ ನೇರವಾಗಿ ಮರು ಟೆಂಡರ್‌ನ್ನು ಆಹ್ವಾನಿಸಿ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

3) ಸಿಪ್ಲಾ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಲಾದ ಅನುದಾನಕ್ಕೆ, ಸದರಿ ಅನುದಾನವು ಈಗಾಗಲೇ ಸಂಪೂರ್ಣವಾಗಿ ಬಳಕೆಯಾಗಿದ್ದಲ್ಲಿ, ಸಂಬಂಧ ಪಟ್ಟ ಇಲಾಖೆಗೆ ನಿಖರವಾದ ವರದಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲು ಸೂಚಿಸಲಾಯಿತು.

4) ನಾರಯಣ ನೇತ್ರಾಲಯ ಮತ್ತು ರಿಮ್ಸ್ ಸಂಸ್ಥೆಯೊಂದಿಗೆ ಆರ್.ಓ.ಪಿ ಸಂಬಂಧ ಒಡಂಬಡಿಕೆ ಮಾಡಿಕೊಂಡಿದ್ದಲ್ಲಿ ಅದರ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಮತ್ತು ರಿಮ್ಸ್ ಸಂಸ್ಥೆಯಲ್ಲಿ ನೇತ್ರ ವಿಭಾಗದ ತಂತ್ರಜ್ಞರಿಗೆ ಆರ್.ಓ.ಪಿ ಕುರಿತು ತರಬೇತಿಯನ್ನು ನೀಡಲು, ತಂತ್ರಜ್ಞರನ್ನು ಮಿಂಟೋ ಆಸ್ಪತ್ರೆಗೆ ತರಬೇತಿಗೆ ನಿಯೋಜಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

5) ಪರಿಶಿಷ್ಟ ಜಾತಿ ಮತ್ತು ಪರಿಷ್ಟ ಪಂಗಡದ ಉಪಯೋಜನೆ ಅಡಿಯಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ 2016–17 ನೇ ಸಾಲಿನ ಅನುದಾನವನ್ನು ಅದೇ ಉದ್ದೇಶಗಳಿಗೆ ಸಂಪೂರ್ಣ ಬಳಕೆ ಮಾಡಿಕೊಳ್ಳುವಂತೆ ಸೂಚಿಸಲಾಯಿತು. ಒಂದು ವೇಳೆ ರಿಮ್ಸ್ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅನುದಾನವು ಬಳಕೆಯಾಗದಿದ್ದಲ್ಲಿ, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅಗತ್ಯತೆಯಿದ್ದಲ್ಲಿ ನಿಯಮಾನುಸಾರ ಅನುದಾನವನ್ನು ನೀಡುವಂತೆ ಸಭೆಯಲ್ಲಿ ಸೂಚಿಸಲಾಯಿತು.

6) ಇ – ಕ್ಲಾಸ್ ನ ಕುರಿತು ಸಂಪೂರ್ಣ ಮಾಹಿತಿಯನ್ನು ಪ್ರತ್ಯೇಕವಾಗಿ ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಕರು, ರಿಮ್ಸ್ ರಾಯಚೂರು ಇವರಿಗೆ ಸೂಚಿಸಲಾಯಿತು.

Director
RIMS, Raichur

| ವಿಷಯ ಸೂಚಿ ಸಂಖ್ಯೆ – 02: | ರಿಮ್ಸ್ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150ಕ್ಕೆ ಹೆಚ್ಚಿಸಿರುವ ಸಂಬಂಧ ಭಾರತೀಯ ವೈದ್ಯಕೀಯ ಮಂಡಳಿಯ 2ನೇ ನವೀಕರಣಕ್ಕೆ ಅವಶ್ಯವಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಸಂಚಿತ ವೇತನದ ಮೇಲೆ ತಾತ್ಕಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ. |
|---|---|

ಸರ್ಕಾರದ ಆದೇಶ ಸಂಖ್ಯೆ ಆಕುಕ / 190 / ಎಂಪಿಎಸ್ / 2016 ದಿನಾಂಕ 03.04.2017 ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸುವ ಸಂಬಂಧ ಅವಶ್ಯವಿರುವ ಒಟ್ಟು 44 ಬೋಧಕ ಹಾಗೂ 220 ಬೋಧಕೇತರ ಸಿಬ್ಬಂದಿಗಳ ಹುದ್ದೆಗಳ ಮಂಜೂರಾತಿಗಾಗಿ ಹುದ್ದೆವಾರು, ವಿಭಾಗವಾರು ವಿವರಗಳನ್ನು ಹಾಗೂ ಹುದ್ದೆಗಳಿಗೆ ತಗುಲಬಹುದಾದ ವೆಚ್ಚದ ವಿವರಗಳೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದ ಹಿನ್ನಲೆಯಲ್ಲಿ ಸರ್ಕಾರದ ನಿರ್ದೇಶನದಂತೆ, ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಆದರೆ ಸದರಿ ಪ್ರಸ್ತಾವನೆಯು ಪ್ರಸ್ತುತ ಆರ್ಥಿಕ ಇಲಾಖೆಯಲ್ಲಿರುವುದರಿಂದ ಸದರಿ ಹುದ್ದೆಗಳನ್ನು ಸೃಜಿಸಿ ಆರ್ಥಿಕ ಮಂಜೂರಾತಿ ನೀಡಲು ಇನ್ನಷ್ಟು ವಿಳಂಬವಾಗುವ ಸಾಧ್ಯತೆಯಿರುತ್ತದೆ.

ಪ್ರಸ್ತುತ 2017–18 ನೇ ಸಾಲಿಗೆ ಭಾರತೀಯ ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ಸೀಟುಗಳನ್ನು 100 ರಿಂದ 150ಕ್ಕೆ ಹೆಚ್ಚಿಸಲು ಅನುಮತಿಯನ್ನು ನೀಡಲಾಗಿದ್ದು, ಪ್ರಸ್ತುತ 150 ವೈದ್ಯ ವಿದ್ಯಾರ್ಥಿಗಳು ಈ ಸಾಲಿಗೆ ಪ್ರವೇಶವನ್ನು ರಿಮ್ಸ್ ಸಂಸ್ಥೆಯಲ್ಲಿ ಪಡೆದಿರುತ್ತಾರೆ. ವೈದ್ಯಕೀಯ ಸೀಟುಗಳಿಗೆ ತಕ್ಕಂತೆ ಹಾಗೂ ವಿದ್ಯಾರ್ಥಿಗಳ ಬೋಧನಾ ಚಟುವಟಿಕೆಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ, ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ 2ನೇ ನವೀಕರಣಕ್ಕೆ ಅವಶ್ಯವಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ತಾತ್ಕಲಿಕವಾಗಿ ಸಂಚಿತ ವೇತನದ ಮೇಲೆ ನೇಮಕಾತಿ ಮಾಡಿಕೊಳ್ಳುವುದು ಅತಿ ಅವಶ್ಯವಾಗಿರುತ್ತದೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150ಕ್ಕೆ ಹೆಚ್ಚಿಸಿರುವ ಸಂಬಂಧ ಭಾರತೀಯ ವೈದ್ಯಕೀಯ ಮಂಡಳಿಯ 2ನೇ ನವೀಕರಣಕ್ಕೆ ಅವಶ್ಯವಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ತಾತ್ಕಲಿಕವಾಗಿ ಸಂಚಿತ ವೇತನದ ಮೇಲೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಬೋಧಕ ಸಿಬ್ಬಂದಿಗಳ ವಿವರ :–

| ಕ್ರಮ ಸಂಖ್ಯೆ | ಪದನಾಮ | Total Posts | ನೇಮಕಾತಿಯಾದಲ್ಲಿ ಹುದ್ದೆಗೆ ನಿಗದಿಪಡಿಸ ಬೇಕಾದ ಸಂಚಿತ ವೇತನ |
|---|---|---|---|
| 01 | Assoc. Professor | 14 | Rs. 70,000/- |
| 02 | Asst. Professor | 18 | Rs. 60,000/- |
| | Total | 32 | |

ಸಭೆಯ ತೀರ್ಮಾನ :–

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 100 ರಿಂದ 150ಕ್ಕೆ ವೈದ್ಯಕೀಯ ಸೀಟುಗಳನ್ನು ಹೆಚ್ಚಿಸುವ ಸಂಬಂಧ ಅವಶ್ಯವಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹುದ್ದೆಗಳ ಪ್ರಸ್ತಾವನೆಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿರುವುದರಿಂದ, ಸರ್ಕಾರದಿಂದ ಸದರಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹುದ್ದೆಗಳ ಸೃಜನೆಯಾಗುವವರೆಗೆ ತಾತ್ಕಲಿಕ ನೇಮಕಾತಿಗಳನ್ನು ಮಾಡಿಕೊಳ್ಳದಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಅದಕ್ಕೂ ಮೊದಲು ರಿಮ್ಸ್ ಸಂಸ್ಥೆಯಲ್ಲಿ ಈಗಾಗಲೇ ಮಂಜೂರಾದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳು ಪದೋನ್ನತಿಗೆ ಅರ್ಹರಿದ್ದಲ್ಲಿ, ಸದರಿ ಸಿಬ್ಬಂದಿಗಳಿಗೆ ಇಲಾಖಾ ಪದೋನ್ನತಿ ಸಮಿತಿ ಮೂಲಕ ನಿಯಮಾನುಸಾರ ಪದೋನ್ನತಿಯನ್ನು ನೀಡಿ, ಖಾಲಿ ಉಳಿಯುವ ಬೋಧಕ ಸಿಬ್ಬಂದಿ ಹುದ್ದೆಗಳನ್ನು ಪತ್ರಿಕಾ ಪ್ರಕಟಣೆ ಹೊರಡಿಸಿ ನೇರ ಸಂದರ್ಶನದ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಂತೆ ಸಭೆಯು ಅನುಮೋದನೆ ನೀಡಲಾಯಿತು.

Director
RIMS, Raichur

| ವಿಷಯ ಸೂಚಿ ಸಂಖ್ಯೆ – 03: | ರಿಮ್ಸ್ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಲು ವಿವಿಧ ವಿಭಾಗಗಳು ಹಾಗೂ ಆಸ್ಪತ್ರೆಗೆ ಅವಶ್ಯವಿರುವ ಪೀಠೋಪಕರಣ, ಕಾಟ್ಸ್ & ಬೆಡ್ಸ್, ಮತ್ತು ಸಿವಿಲ್ ಕಾಮಗಾರಿಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಅನುಮತಿ ನೀಡುವ ಕುರಿತು. |
|---|---|

ಸರ್ಕಾರದ ಆದೇಶ ಸಂಖ್ಯೆ ಆಕುಕ / 190 / ಎಂಪಿಎಸ್ / 2016 ದಿನಾಂಕ 03.04.2017 ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸುವ ಸಂಬಂಧ ಅವಶ್ಯವಿರುವ ಪೀಠೋಪಕರಣ ಮತ್ತು ಸಿವಿಲ್ ಕಾಮಗಾರಿಗಳನ್ನು ನಿಯಮಾನುಸಾರ ಕೈಗೊಳ್ಳಲು ಅನುಮತಿಯನ್ನು ನೀಡಲಾಗಿರುತ್ತದೆ.

ಪ್ರಸ್ತುತ 2017–18 ನೇ ಸಾಲಿಗೆ ಭಾರತೀಯ ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಲು ಅನುಮತಿಯನ್ನು ನೀಡಲಾಗಿದ್ದು, ಪ್ರಸ್ತುತ ವೈದ್ಯ ವಿದ್ಯಾರ್ಥಿಗಳು ಈ ಸಾಲಿಗೆ ಪ್ರವೇಶವನ್ನು ಪಡೆದಿದ್ದು, ವೈದ್ಯಕೀಯ ಸೀಟುಗಳಿಗೆ ತಕ್ಕಂತೆ ಹಾಗೂ ವಿದ್ಯಾರ್ಥಿಗಳ ಬೋಧನಾ ಚಟುವಟಿಕೆಗಳ ಹಿತದೃಷ್ಟಿಯಿಂದ ಪೀಠೋಪಕರಣ ಹಾಗೂ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಸಂಸ್ಥೆಯ ವಿವಿಧ ವಿಭಾಗಗಳು ಹಾಗೂ ಬೋಧಕ ಆಸ್ಪತ್ರೆಯಿಂದ ಪೀಠೋಪಕರಣ, ಕಾಟ್ಸ್ & ಬೆಡ್ಸ್‌ಗಳನ್ನು ಮತ್ತು ಅವಶ್ಯವಿರುವ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವಂತೆ ಕೋರಿ ಬೇಡಿಕೆ ಪತ್ರಗಳು ಈ ಕಾರ್ಯಲಯಕ್ಕೆ ಸ್ವೀಕೃತವಾಗಿದ್ದು, ಅವುಗಳ ವಿವರ ಈ ಕೆಳಗಿನಂತಿದೆ.

1) ಪೀಠೋಪಕರಣಗಳ ವಿವರ

**RAICHUR INSTITUTE OF MEDICAL SCIENCES, RAICHUR**

**Details of All Departments Required Furniture List**

| Sl.No. | Name of Furniture | Total Qty | Approx | Total Amount |
|---|---|---|---|---|
| 1 | Students Wooden chairs | 500 | 700.00 | 350000.00 |
| 2 | Wooden Round Stool | 250 | 500.00 | 125000.00 |
| 3 | Student Locker Almera | 100 | 10000.00 | 1000000.00 |
| 4 | Steel Metal Round Stool | 1000 | 800.00 | 800000.00 |
| 5 | Metal Racks | 100 | 2000.00 | 200000.00 |
| 6 | Almera (16 Gage) | 100 | 10000.00 | 1000000.00 |
| 7 | Table with marble for stainless steel tops (6'x2'x3') | 5 | 15000.00 | 75000.00 |
| 8 | Table with marble tos or stainless steel half standard size | 3 | 10000.00 | 30000.00 |
| 9 | Trolly Table (steel light) | 2 | 20000.00 | 40000.00 |
| 10 | Woodn Cot with Bed | 4 | 20000.00 | 80000.00 |
| 11 | Racks with Glass | 51 | 7000.00 | 357000.00 |
| 12 | Revolving Chairs | 50 | 5000.00 | 250000.00 |
| 13 | Office Table | 30 | 5000.00 | 150000.00 |
| 14 | Red Chairs | 70 | 3850.00 | 269500.00 |
| 15 | Wooden chair with rotating hand plate | 175 | 1000.00 | 175000.00 |
| 16 | Computer Wheel chair | 3 | 5000.00 | 15000.00 |
| 17 | Strip chairs | 10 | 1300.00 | 13000.00 |
| 18 | Big size Table | 7 | 7700.00 | 53900.00 |



Director
RIMS, Raichur

| | | | | |
|---|---|---|---|---|
| 19 | Table (5x5) | 4 | 4000.00 | 16000.00 |
| 20 | Executive Chairs | 30 | 5000.00 | 150000.00 |
| 21 | Notice Board | 20 | 2000.00 | 40000.00 |
| 22 | Green Board | 15 | 1500.00 | 22500.00 |
| 23 | White Board | 2 | 1500.00 | 3000.00 |
| 24 | Table (3x2) | 155 | 400.00 | 62000.00 |
| 25 | Examination Table (3x3) | 10 | 20000.00 | 200000.00 |
| 26 | Table (2x2) | 10 | 1200.00 | 12000.00 |
| 27 | Table (4x3) | 4 | 7100.00 | 28400.00 |
| 28 | Cots (6x3) | 600 | 4000.00 | 2400000.00 |
| 29 | Plastic Chiars (cello) | 650 | 3600.00 | 2340000.00 |
| 30 | Bed Side lockers | 1000 | 3200.00 | 3200000.00 |
| 31 | Matress | 1000 | 4000.00 | 4000000.00 |
| 32 | Pillows | 1000 | 380.00 | 380000.00 |
| 33 | Wooden Tables | 14 | 1500.00 | 21000.00 |
| 34 | Computer Tables | 10 | 1500.00 | 15000.00 |
| 35 | Cots with side riling with two sided IV stands | 40 | 7250.00 | 290000.00 |
| 36 | Bed Metters with rexin sheet cover | 100 | 3500.00 | 350000.00 |
| 37 | Table (6x4) | 2 | 1400.00 | 2800.00 |
| 38 | Medicine Trolley | 20 | 20000.00 | 400000.00 |
| 39 | Examination Table | 2 | 20000.00 | 40000.00 |
| 40 | Lockers stand with 20 Compartments (4x5) | 3 | 15000.00 | 45000.00 |
| 41 | Crush Cart (for placing Medicine) | 20 | 25000.00 | 500000.00 |
| 42 | Residents Lockers | 30 | 4000.00 | 120000.00 |
| 43 | IV Stands | 200 | 3000.00 | 600000.00 |
| 44 | Stretchers | 25 | 9000.00 | 225000.00 |
| 45 | ICU cots | 10 | 60000.00 | 600000.00 |
| 46 | OT Table (Hydraulic) | 2 | | 150000.00 |
| 47 | Labour Cot | 10 | 60000.00 | 600000.00 |
| 48 | Wheel Chairs | 50 | 12000.00 | 600000.00 |
| | Grand Total | | | 22396100.00 |

2) ಸಿವಿಲ್ ಕಾಮಗಾರಿಗಳ ವಿವರ

ಭಾರತೀಯ ವೈದ್ಯಕೀಯ ಮಂಡಳಿಯ ನಿರ್ದೇಶನದಂತೆ, ಈ ಕೆಳಕಂಡ ಸಿವಿಲ್ ಕಾಮಗಾರಿಗಳನ್ನು ರಿಮ್ಸ್ ಸಂಸ್ಥೆಯಲ್ಲಿ ಕೈಗೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆಕುಕ ಇಲಾಖೆ ಇಂಜಿನಿಯರಿಂಗ್ ವಿಭಾಗ, ಉಪವಿಭಾಗ, ರಾಯಚೂರು ಇವರಿಂದ ರೂ. 5000.00 ಲಕ್ಷಗಳ ರೇಖಾ ಅಂದಾಜು ಪಟ್ಟಿಯನ್ನು ಪಡೆಯಲಾಗಿರುತ್ತದೆ.

Director
RIMS, Raichur

1) ರಿಮ್ಸ್ ಕೇಂದ್ರ ಗ್ರಂಥಾಲಯದ ಕಟ್ಟಡವು ಪ್ರಸ್ತುತ 1200 ಚ.ಮೀ ಸ್ಥಳದಲ್ಲಿ ಲಭ್ಯವಿದ್ದು, ಇನ್ನು 1200 ಚ.ಮೀ ಸ್ಥಳದಲ್ಲಿ ಕೇಂದ್ರ ಗ್ರಂಥಾಲಯವನ್ನು ನಿರ್ಮಾಣ ಮಾಡುವುದು.
2) ರಿಮ್ಸ್ ಆವರಣದಲ್ಲಿ 70 ಬೋಧಕೇತರ ಸಿಬ್ಬಂದಿ ವಸತಿ ಗೃಹಗಳನ್ನು ಹೊಸದಾಗಿ ನಿರ್ಮಿಸುವುದು.
3) ರಿಮ್ಸ್ ಆವರಣದಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ಮಾರ್ಗಸೂಚಿಯಂತೆ ಅವಶ್ಯವಿರುವ 46 ಹಿರಿಯ ಸ್ಥಾನಿಕರ 1-BHK (ಇದರಲ್ಲಿ ಕಿಚನ್, ಬಾತ್‌ರೂಂ, ಟಾಯಿಲೆಟ್ ರೂಂ, ಒಂದು ಹಾಲ್ ಹಾಗೂ ಒಂದು ಬೆಡ್ ರೂಂ ಒಳಗೊಂಡಿರಬೇಕು ಹಾಗೂ ವಿಸ್ತಾರವಾಗಿರಬೇಕು) ರೆಸಿಡೆಂಟ್ ವಸತಿ ಗೃಹಗಳು ಹಾಗೂ 58 ಕಿರಿಯ ಸ್ಥಾನಿಕರ Single Room with Attached Bathroom ರೆಸಿಡೆಂಟ್ ಕೊಠಡಿಗಳನ್ನು ನಿರ್ಮಿಸುವುದು.
4) 250 ವಿದ್ಯಾರ್ಥಿಗಳ ಪರೀಕ್ಷೆ ಬರೆಯಲು ಅನುಕೂಲವಾಗುವಂತೆ ಪರೀಕ್ಷಾ ಕೊಠಡಿಯನ್ನು ನಿರ್ಮಾಣ ಮಾಡುವುದು.

ಕಾರಣ ರಿಮ್ಸ್ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಲು ವಿವಿಧ ವಿಭಾಗಗಳು ಹಾಗೂ ಆಸ್ಪತ್ರೆಯಿಂದ ಸ್ವೀಕೃತವಾಗಿರುವ ಬೇಡಿಕೆ ಪತ್ರಗಳಿಗನುಗುಣವಾಗಿ ಪೀಠೋಪಕರಣ, ಕಾಟ್ಸ್ & ಬೆಡ್ಸ್, ಮತ್ತು ಕಾಟ್ಸ್ & ಬೆಡ್ಸ್‌ಗಳನ್ನು ಮತ್ತು ಸಿವಿಲ್ ಕಾಮಗಾರಿಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಮತ್ತು ಪೀಠೋಪಕರಣ, ಕಾಟ್ಸ್ ಮತ್ತು ಬೆಡ್ಸ್ ಖರೀದಿಸಲು ವೆಚ್ಚವಾಗುವ ಅಂದಾಜು ರೂ. 2,23,96,100/- ಗಳನ್ನು ಈ ಸಂಸ್ಥೆಯ ಲೆಕ್ಕ ಶಿರ್ಷಿಕೆ 2210-05-105-1-40-101 ಅಡಿಯಲ್ಲಿ ಉಳಿತಾಯವಾಗಿರುವ ರೂ. 8,24,37,540/- ಗಳ ಅನುದಾನದಿಂದ ಭರಿಸಲು ಹಾಗೂ ಸಿವಿಲ್ ಕಾಮಗಾರಿಗೆ ಸಂಬಂಧಿಸಿದ ವೆಚ್ಚವನ್ನು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸರ್ಕಾರದ ನಿರ್ದೇಶನದಂತೆ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ವಿಭಾಗಗಳು ಹಾಗೂ ಆಸ್ಪತ್ರೆಯಿಂದ ಸ್ವೀಕೃತವಾಗಿರುವ ಬೇಡಿಕೆ ಪತ್ರಗಳಿಗನುಗುಣವಾಗಿ ಪೀಠೋಪಕರಣ, ಕಾಟ್ಸ್ & ಬೆಡ್ಸ್, ಮತ್ತು ಪೀಠೋಪಕರಣ, ಕಾಟ್ಸ್ & ಬೆಡ್ಸ್‌ಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಕ್ರಮ, ಕೈಗೊಳ್ಳುವಂತೆ ಹಾಗೂ ಸದರಿ ಪೀಠೋಪಕರಣ, ಕಾಟ್ಸ್ & ಬೆಡ್ಸ್, ಮತ್ತು ಕಾಟ್ಸ್ & ಬೆಡ್ಸ್‌ಗಳ ಖರೀದಿಗೆ ಸಲ್ಲುವ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸುವಂತೆ ಸಭೆಯು ಅನುಮೋದನೆ ನೀಡಲಾಯಿತು.

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಅವಶ್ಯವಿರುವ ರೂ. 50.00 ಕೋಟಿಗಳ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಈಗಾಗಲೇ ಕೇಂದ್ರ ಸರ್ಕಾರದಿಂದ ರೂ. 12.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಸದರಿ ಸಿವಿಲ್ ಕಾಮಗಾರಿಗಳನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಹೆಚ್.ಎಸ್.ಡಿ.ಆರ್.ಪಿ / ಆಕುಕ ಇಲಾಖೆ ಇಂಜಿನಿಯರಿಂಗ್ ವಿಭಾಗ, ಉಪವಿಭಾಗ, ರಾಯಚೂರು ಇವರ ಮುಖಾಂತರ ವಿವರವಾದ ಅಂದಾಜು ಪಟ್ಟಿಯನ್ನು ಪಡೆದು ಸಿವಿಲ್ ಕಾಮಗಾರಿಗಳನ್ನು ನಿಯಮಾನುಸಾರ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 04: | ರಿಮ್ಸ್ ಸಂಸ್ಥೆಯ ಅಂಗರಚನಾ ಶಾಸ್ತ್ರ ವಿಭಾಗ ಹಾಗೂ ವಿಧಿ ವೈದ್ಯಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ **6 x 3 & 2 x 1** ಸಾಮಾರ್ಥ್ಯದ **Body Mortuary Cabinet** ಗಳನ್ನು ಖರೀದಿಸಿ ಪೂರೈಸಲು ಮರು ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

ಭಾರತೀಯ ವೈದ್ಯಕೀಯ ಮಂಡಳಿಯು ಪರಿವೀಕ್ಷಣೆಯ ವೇಳೆಯಲ್ಲಿ ಅಂಗರಚನಾ ಶಾಸ್ತ್ರ ವಿಭಾಗ ಹಾಗೂ ವಿಧಿವೈದ್ಯಶಾಸ್ತ್ರ ವಿಭಾಗದಲ್ಲಿ Body Mortuary Cabinetಗಳು ಲಭ್ಯವಿಲ್ಲದಿರುವುದನ್ನು ಗುರುತಿಸಿ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯನ್ನು ಸರಿಪಡಿಸಲು ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಅಂಗರಚನಾ ಶಾಸ್ತ್ರ ವಿಭಾಗ, ರಿಮ್ಸ್, ರಾಯಚೂರು ಇವರು ಆರು ಶವಗಳನ್ನು ಸಂಗ್ರಹಿಸಲು ಸಾಮಾರ್ಥ್ಯವಿರುವ 03 ಉಪಕರಣಗಳು ಮತ್ತು 02 ಶವಗಳನ್ನು ಸಂಗ್ರಹಿಸಲು ಸಾಮಾರ್ಥ್ಯವಿರುವ 2 ಉಪಕರಣಗಳ Body Mortuary Cabinet ಗಳನ್ನು ಖರೀದಿಸಿ



Director
RIMS, Raichur

ಪೂರೈಸುವಂತೆ ಈ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿದ್ದು, 6 & 2 ಸಾಮಾರ್ಥ್ಯದ **Body Mortuary Cabinet**ಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಪ್ರಸ್ತಾವನೆಯನ್ನು ಏಕಕಡತದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರದ ಅನುಮೋದನೆಯಂತೆ ಕೆ.ಟಿ.ಪಿ.ಪಿ ಕಾಯ್ದೆಯನ್ವಯ 30 ದಿನಗಳ ಕಾಲಾವಕಾಶ ನೀಡಿ, ಈ ಕಾರ್ಯಾಲಯದ ಪತ್ರ ಸಂಖ್ಯೆ. ರಿಮ್ಸ್ / ಪೂರೈಕೆ / ಟೆಂಡರ್ / ಉಪಕರಣ / 22 / 2017-18 / 51 ದಿನಾಂಕ 17.06.2017 ರನ್ವಯ ಇ- ಟೆಂಡರ್ ಆಹ್ವಾನಿಸಲಾಗಿತ್ತು.

ಆದರೆ ಆಹ್ವಾನಿಸಲಾದ ಇ – ಟೆಂಡರ್‌ನಲ್ಲಿ ಓರ್ವ ಟೆಂಡರ್‌ದಾರರು ಮಾತ್ರ ಭಾಗವಹಿಸಿದ್ದರಿಂದ ಮತ್ತು ಟೆಂಡರ್‌ದಾರರು ಟೆಂಡರ್ ಷರತ್ತಿನ್ವಯ ಸೂಕ್ತ ದಾಖಲೆಗಳನ್ನು ಇ – ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡದೇ ಇರುವುದರಿಂದ ದಿನಾಂಕ 21.08.2017 ರಂದು ಜರುಗಿದ ಟೆಂಡರ್ ಸಮಿತಿ ಸಭೆಯಲ್ಲಿ ಟೆಂಡರ್‌ನ್ನು ತಿರಸ್ಕರಿಸಿ, ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಲು ಸರ್ವಾನುಮತದಿಂದ ತೀರ್ಮಾನಿಸಿ, ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕಾರಣ ಭಾರತೀಯ ವೈದ್ಯಕೀಯ ಮಂಡಳಿಯ ಆಕ್ಷೇಪಣೆಯನ್ನು ಸರಿಪಡಿಸಲು ರಿಮ್ಸ್ ಸಂಸ್ಥೆಯ ಅಂಗಚರನಾ ಶಾಸ್ತ್ರ ವಿಭಾಗ ಹಾಗೂ ವಿಧಿ ವೈದ್ಯಶಾಸ್ತ್ರ ವಿಭಾಗಗಕ್ಕೆ ಅವಶ್ಯವಿರುವ ಆರು ಶವಗಳನ್ನು ಸಂಗ್ರಹಿಸಲು ಸಾಮಾರ್ಥ್ಯವಿರುವ 03 ಉಪಕರಣಗಳು ಮತ್ತು 02 ಶವಗಳನ್ನು ಸಂಗ್ರಹಿಸಲು ಸಾಮಾರ್ಥ್ಯವಿರುವ 2 ಉಪಕರಣಗಳ **Body Mortuary Cabinet** ಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಸಾಕಷ್ಟು ಕಾಲವಕಾಶ ನೀಡಿ, ಮರು ಟೆಂಡರ್ ಆಹ್ವಾನಿರುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಕರ್ನಾಟಕ ಪಾರದರ್ಶಕತೆ ಅಧಿನಿಯಮದನ್ವಯ ಕನಿಷ್ಟ 15 ದಿನಗಳ ಕಾಲಾವಕಾಶವನ್ನು ನೀಡಿ, ಟೆಂಡರ್ ಆಹ್ವಾನಿಸಬೇಕಾಗುತ್ತದೆ. ಆದರೆ ಭಾರತೀಯ ವೈದ್ಯಕೀಯ ಮಂಡಳಿಯು ಈಗಾಗಲೇ ಗುರುತಿಸಿರುವ ಆಕ್ಷೇಪಣೆಗಳಿಗೆ ಜರೂರಾಗಿ ಅನುಪಾಲನ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ ಅಂಗರಚನಾ ಶಾಸ್ತ್ರ ವಿಭಾಗ ಹಾಗೂ ವಿಧಿ ವೈದ್ಯಶಾಸ್ತ್ರ ವಿಭಾಗಗಕ್ಕೆ ಅವಶ್ಯವಿರುವ ಆರು ಶವಗಳನ್ನು ಸಂಗ್ರಹಿಸಲು ಸಾಮಾರ್ಥ್ಯವಿರುವ 03 ಉಪಕರಣಗಳು ಮತ್ತು 02 ಶವಗಳನ್ನು ಸಂಗ್ರಹಿಸಲು ಸಾಮಾರ್ಥ್ಯವಿರುವ 2 ಉಪಕರಣಗಳ **Body Mortuary Cabinet** ಗಳನ್ನು ಸಾಕಷ್ಟು ಕಾಲವಕಾಶ ನೀಡಿ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಿರುವ ಬಗ್ಗೆ ಸಭೆಯು ಪರಿಶೀಲಿಸಿ ಘಟನೋತ್ತರ ಅನುಮೋದನೆ ನೀಡಲಾಯಿತು.

ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಸಿಂಗಲ್ ಟೆಂಡರ್ ಬಂದಿದ್ದಲ್ಲಿ, ಕೂಡಲೇ ಸದರಿ ಟೆಂಡರ್‌ನ್ನು ರದ್ದುಗೊಳಿಸಿ, ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಕಾಲವಕಾಶ ನೀಡಿ ಮರು ಟೆಂಡರ್ ಆಹ್ವಾನಿಸಲು ಸಭೆಯು ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 05: | ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ, ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಬೋಧನಾ ಕೊಠಡಿಗೆ ಅವಶ್ಯವಿರುವ ಕಾಮಗಾರಿಗಳನ್ನು ಕೈಗೊಳ್ಳಲು ಮರು ಟೆಂಡರ್ ಆಹ್ವಾನಿಸಿರುವ ಟೆಂಡರ್ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು. |

ಭಾರತೀಯ ವೈದ್ಯಕೀಯ ಮಂಡಳಿಯು ಪರೀವೀಕ್ಷಣೆಯ ವೇಳೆಯಲ್ಲಿ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಬೋಧನಾ ಕೊಠಡಿಯಲ್ಲಿ ಬೋಧನಾ ಕೊಠಡಿ ಲಭ್ಯವಿದ್ದು, ಬೋಧನಾ ಕೊಠಡಿಗೆ ಬೇಕಾದ ಸೌಲಭ್ಯಗಳು ಲಭ್ಯವಿಲ್ಲದೇ ಇರುವುದರಿಂದ ಆಕ್ಷೇಪಣೆಯನ್ನು ಗುರುತಿಸಲಾಗಿರುತ್ತದೆ. ಸದರಿ ಆಕ್ಷೇಪಣೆಯನ್ನು ಜರೂರಾಗಿ ಸರಿಪಡಿಸಿ, ಅನುಪಾಲನ ವರದಿಯನ್ನು ಭಾರತೀಯ ವೈದ್ಯಕೀಯ ಮಂಡಳಿಗೆ ಸಲ್ಲಿಸಲು ನಿಯಮಾನುಸಾರ ಇ – ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲು ಪ್ರಸ್ತಾವನೆಯನ್ನು ಏಕಕಡತದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರದ ಅನುಮೋದನೆಯಂತೆ 30 ದಿನಗಳ ಕಾಲಾವಕಾಶ ನೀಡಿ, ಈ ಕಾರ್ಯಾಲಯದ ಪತ್ರ ಸಂಖ್ಯೆ ಎಂಇ / 2017-18 / ಓಡಬ್ಲೂ / ವರ್ಕ್_ಇಂಡೆಂಟ್ / 119 ದಿನಾಂಕ 19.06.2017 ರನ್ವಯ ಇ– ಟೆಂಡರ್ ಆಹ್ವಾನಿಸಲಾಗಿತ್ತು.



Director
RIMS, Raichur

ಇ – ಟೆಂಡರ್‌ನಲ್ಲಿ ಮೂರು ಟೆಂಡರ್‌ದಾರರು ಭಾಗವಹಿಸಿದ್ದು, ಮೂರು (03) ಟೆಂಡರ್‌ದಾರರು ಟೆಂಡರ್ ಷರತ್ತಿನ್ವಯ ಸೂಕ್ತ ದಾಖಲೆಗಳನ್ನು ಇ – ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡದೇ ಇರುವುದರಿಂದ ಹಾಗೂ ಟೆಂಡರ್ ಪರಿಶೀಲನಾ ಸಮಿತಿ ಸಭೆಯ ದಾಖಲೆಗಳ ಪರಿಶೀಲನೆ ವೇಳೆಯಲ್ಲಿ ಸಲ್ಲಿಸಲು ವಿಫಲವಾಗಿರುವುದರಿಂದ, ದಿನಾಂಕ 21.08.2017 ರಂದು ಜರುಗಿದ ಟೆಂಡರ್ ಸಮಿತಿ ಸಭೆಯ ತೀರ್ಮಾನದಂತೆ ಸದರಿ ಟೆಂಡರ್‌ನ್ನು ತಿರಸ್ಕರಿಸಿ, ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಲು ತೀರ್ಮಾನಿಸಿ, ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕಾರಣ ಭಾರತೀಯ ವೈದ್ಯಕೀಯ ಮಂಡಳಿಯ ಆಕ್ಷೇಪಣೆಯನ್ನು ಸರಿಪಡಿಸಲು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಬೋಧನಾ ಕೊಠಡಿಗೆ ಅವಶ್ಯವಿರುವ ಪೀಠೋಪಕರಣಗಳು, ಫ್ಲೋರಿಂಗ್, ಫಾಲ್ ಸೀಲಿಂಗ್, ವಾಲ್ ಟೈಲ್ಸ್, ಆಡಿಯೋ ವಿಷುವಲ್ಸ್, ಲೈಟ್ ಮತ್ತು ವಿದ್ಯುತ್ತೀಕರಣದ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಿರುವ ಟೆಂಡರ್ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ನೀಡುವಂತೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಕರ್ನಾಟಕ ಪಾರದರ್ಶಕತೆ ಅಧಿನಿಯಮದನ್ವಯ ಕನಿಷ್ಟ 15 ದಿನಗಳ ಕಾಲಾವಕಾಶವನ್ನು ನೀಡಿ, ಟೆಂಡರ್ ಆಹ್ವಾನಿಸಬೇಕಾಗುತ್ತದೆ. ಆದರೆ ಭಾರತೀಯ ವೈದ್ಯಕೀಯ ಮಂಡಳಿಯು ಈಗಾಗಲೇ ಗುರುತಿಸಿರುವ ಆಕ್ಷೇಪಣೆಗಳಿಗೆ ಜರೂರಾಗಿ ಅನುಪಾಲನ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಬೋಧನಾ ಕೊಠಡಿಗೆ ಅವಶ್ಯವಿರುವ ಪೀಠೋಪಕರಣಗಳು, ಫ್ಲೋರಿಂಗ್, ಫಾಲ್ ಸೀಲಿಂಗ್, ವಾಲ್ ಟೈಲ್ಸ್, ಆಡಿಯೋ ವಿಷುವಲ್ಸ್, ಲೈಟ್ ಮತ್ತು ವಿದ್ಯುತ್ತೀಕರಣದ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಿರುವ ಬಗ್ಗೆ ಸಭೆಯು ಪರಿಶೀಲಿಸಿ ಘಟನೋತ್ತರ ಅನುಮೋದನೆ ನೀಡಲಾಯಿತು.

ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಸಿಂಗಲ್ ಟೆಂಡರ್ ಬಂದಿದ್ದಲ್ಲಿ, ಕೂಡಲೇ ಸದರಿ ಟೆಂಡರ್‌ನ್ನು ರದ್ದುಗೊಳಿಸಿ, ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಕಾಲವಕಾಶ ನೀಡಿ ಮರು ಟೆಂಡರ್ ಆಹ್ವಾನಿಸಲು ಸಭೆಯು ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 06: | ರಿಮ್ಸ್ ಸಂಸ್ಥೆಯಲ್ಲಿರುವ ವೈದ್ಯಕೀಯ ಶಿಕ್ಷಣ ಕೊಠಡಿಗೆ ಬೇಕಾದ ಅವಶ್ಯವಿರುವ ಕಾಮಗಾರಿಗಳನ್ನು ಕೈಗೊಳ್ಳಲು ಮರು ಟೆಂಡರ್ ಆಹ್ವಾನಿಸಿರುವ ಟೆಂಡರ್ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು |

ಭಾರತೀಯ ವೈದ್ಯಕೀಯ ಮಂಡಳಿಯು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150ಕ್ಕೆ ಹೆಚ್ಚಿಸಲು 2017–18 ನೇ ಸಾಲಿನಿಂದ ಅನುಮತಿಯನ್ನು ನೀಡಿರವುದರಿಂದ ವೈದ್ಯಕೀಯ ಶಿಕ್ಷಣ ಕೊಠಡಿಯಲ್ಲಿ ಇ – ಕ್ಲಾಸ್, ಎಥಿಕಲ್, ವರ್ಕ್‌ಶಾಪ್, ಸಿ.ಎಂ.ಇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸ್ಥಳಾವಕಾಶದ ಕೊರತೆಯಿರುವ ಕಾರಣ ಮಿಣಿ ಶಾಸ್ತ್ರ ವಿಭಾಗದಲ್ಲಿರುವ ವೈದ್ಯಕೀಯ ಶಿಕ್ಷಣ ಕೊಠಡಿಯನ್ನು ರಿಮ್ಸ್ ವೈದ್ಯಕೀಯ ಕಾಲೇಜಿನ 3ನೇ ಮಹಡಿಯಲ್ಲಿರುವ ಕೊಠಡಿಗೆ ಸ್ಥಳಾಂತರಿಸಿ, ಸದರಿ ಕೊಠಡಿಗೆ ಬೇಕಾದ ಅವಶ್ಯ ಕಾಮಗಾರಿಗಳನ್ನು ಕೈಗೊಳ್ಳಲು ನಿಯಮಾನುಸಾರ ಇ – ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲು ಅನುಮತಿಯನ್ನು ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಏಕಕಡತದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರದ ಅನುಮೋದನೆಯಂತೆ 21 ದಿನಗಳ ಕಾಲಾವಕಾಶ ನೀಡಿ, ಈ ಕಾರ್ಯಲಯದ ಪತ್ರ ಸಂಖ್ಯೆ ರಿಮ್ಸ್ / ಪೂರೈಕೆ / ಟೆಂಡರ್ / ಸಿವಿಲ್ / ಉಪಕರಣ / 25 / 2017–18 ದಿನಾಂಕ 10.07.2017 ರನ್ವಯ ಇ– ಟೆಂಡರ್ ಆಹ್ವಾನಿಸಲಾಗಿತ್ತು.

ಇ – ಟೆಂಡರ್‌ನಲ್ಲಿ ಓರ್ವ ಟೆಂಡರ್‌ದಾರರು ಭಾಗವಹಿಸಿದ್ದು, ಟೆಂಡರ್‌ದಾರರು ಟೆಂಡರ್ ಷರತ್ತಿನ್ವಯ ಸೂಕ್ತ ದಾಖಲೆಗಳನ್ನು ಮತ್ತು ಟೆಂಡರ್ ದಾಖಲೆಗಳಿಗೆ ನೋಟರಿ ಮಾಡಿಸದೇ ಇರುವುದರಿಂದ ದಿನಾಂಕ 21.08.2017 ರಂದು ಜರುಗಿದ ಟೆಂಡರ್ ಸಮಿತಿ ಸಭೆಯಲ್ಲಿ ಸದರಿಯವರ ಟೆಂಡರ್‌ನ್ನು ತಿರಸ್ಕರಿಸಿ, ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಲು ತೀರ್ಮಾನಿಸಿ, ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ.



Director
RIMS, Raichur

ಕಾರಣ ರಿಮ್ಸ್ ಸಂಸ್ಥೆಯಲ್ಲಿರುವ ವೈದ್ಯಕೀಯ ಶಿಕ್ಷಣ ಕೊಠಡಿಗೆ ಬೇಕಾದ ಪೀಠೋಪಕರಣಗಳು, ಹವಾನಿಯಂತ್ರಕಗಳು, ಎಲ್.ಸಿ.ಡಿ, ಪ್ರಾಜೆಕ್ಟ್, ವಾಲ್ ಪೆನಲಿಂಗ್ ಹಾಗೂ ವಿದ್ಯುತ್‌ತೀಕರಣದ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಿರುವ ಟೆಂಡರ್ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ನೀಡುವಂತೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಕರ್ನಾಟಕ ಪಾರದರ್ಶಕತೆ ಅಧಿನಿಯಮದನ್ವಯ ಕನಿಷ್ಟ 15 ದಿನಗಳ ಕಾಲಾವಕಾಶವನ್ನು ನೀಡಿ, ಟೆಂಡರ್ ಆಹ್ವಾನಿಸಬೇಕಾಗುತ್ತದೆ. ಆದರೆ ಭಾರತೀಯ ವೈದ್ಯಕೀಯ ಮಂಡಳಿಯು ಈಗಾಗಲೇ ಗುರುತಿಸಿರುವ ಆಕ್ಷೇಪಣೆಗಳಿಗೆ ಜರೂರಾಗಿ ಅನುಪಾಲನ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ ರಿಮ್ಸ್ ಸಂಸ್ಥೆಯಲ್ಲಿರುವ ವೈದ್ಯಕೀಯ ಶಿಕ್ಷಣ ಕೊಠಡಿಗೆ ಬೇಕಾದ ಪೀಠೋಪಕರಣಗಳು, ಹವಾನಿಯಂತ್ರಕಗಳು, ಎಲ್.ಸಿ.ಡಿ, ಪ್ರಾಜೆಕ್ಟ್, ವಾಲ್ ಪೆನಲಿಂಗ್ ಹಾಗೂ ವಿದ್ಯುತ್‌ತೀಕರಣದ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಮರು ಟೆಂಡರ್ ಆಹ್ವಾನಿಸಿರುವ ಬಗ್ಗೆ ಸಭೆಯು ಪರಿಶೀಲಿಸಿ ಘಟನೋತ್ತರ ಅನುಮೋದನೆ ನೀಡಲಾಯಿತು.

ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಸಿಂಗಲ್ ಟೆಂಡರ್ ಬಂದಿದ್ದಲ್ಲಿ, ಕೂಡಲೇ ಸದರಿ ಟೆಂಡರ್‌ನ್ನು ರದ್ದುಗೊಳಿಸಿ, ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಕಾಲವಕಾಶ ನೀಡಿ ಮರು ಟೆಂಡರ್ ಆಹ್ವಾನಿಸಲು ಸಭೆಯು ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 07 : | ರಿಮ್ಸ್ ಬೋಧಕ ಆಸ್ಪತ್ರೆಗೆ 2017–18 ನೇ ಸಾಲಿಗೆ ಅವಶ್ಯವಿರುವ ವಿವಿಧ ಲಿನನ್ ಸಾಮಾಗ್ರಿಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಅನುಮತಿ ನೀಡುವ ಕುರಿತು. |

ರಿಮ್ಸ್ ಬೋಧಕ ಆಸ್ಪತ್ರೆಗೆ 2017–18 ನೇ ಸಾಲಿಗೆ ಅವಶ್ಯವಿರುವ ವಿವಿಧ ಲಿನನ್ ಸಾಮಾಗ್ರಿಗಳನ್ನು ಪೂರೈಸುವಂತೆ ಕೋರಿ ವಾರ್ಷಿಕ ಬೇಡಿಕೆ ಪಟ್ಟಿಯನ್ನು ಆಯಾ ವಾರ್ಡ್‌ಗಳಿಂದ ಮಾಹಿತಿಯನ್ನು ಪಡೆದು ಒಟ್ಟು ಬೇಡಿಕೆ ಪಟ್ಟಿಯನ್ನು ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರು ಪತ್ರ ಸಂಖ್ಯೆ. ರಿಮ್ಸ್ / ಎಸ್.ಎನ್.ಸಿ.ಯು / 2017 / 516 ದಿನಾಂಕ 04.09.2017 ರನ್ವಯ ಕೋರಿರುತ್ತಾರೆ.

ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಲಿಲನ್ ಸಾಮಾಗ್ರಿಗಳನ್ನು ನಿಯಮಾನುಸಾರ ಖರೀದಿಸಲು ವೆಚ್ಚವಾಗುವ ಅಂದಾಜು ರೂ. 90,85,030/– ಗಳನ್ನು ಭರಿಸಲು ಈ ಸಂಸ್ಥೆಯ ಲೆಕ್ಕ ಶಿರ್ಷಿಕೆ 2210–05–105–1–54–103 ಅಡಿಯಲ್ಲಿ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನದಿಂದ ಈ ವೆಚ್ಚವನ್ನು ಭರಿಸಬಹುದಾಗಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಗೆ 2017–18 ನೇ ಸಾಲಿಗೆ ಅವಶ್ಯವಿರುವ ವಿವಿಧ ಲಿನನ್ ಸಾಮಾಗ್ರಿಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಹಾಗೂ ಅಂದಾಜು ರೂ. 90,85,030/– ಗಳ ವೆಚ್ಚವನ್ನು ಈ ಸಂಸ್ಥೆಯ ಲೆಕ್ಕ ಶಿರ್ಷಿಕೆ 2210–05–105–1–54–103 ಅಡಿಯಲ್ಲಿ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಗೆ 2017–18ನೇ ಸಾಲಿಗೆ ಅವಶ್ಯವಿರುವ ವಿವಿಧ ಲಿನನ್ ಸಾಮಾಗ್ರಿಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಅಥವಾ ಪ್ರಿಯದರ್ಶಿನಿ ಹ್ಯಾಂಡ್‌ಲೂಮ್ಸ್ ಇವರ ಮುಖಾಂತರ ಖರೀದಿಸಲು ಹಾಗೂ ಇದಕ್ಕೆ ಸಲ್ಲುವ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಿಕೊಳ್ಳುವಂತೆ ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

Director
RIMS, Raichur

| ವಿಷಯ ಸೂಚಿ ಸಂಖ್ಯೆ – 08 : | ಭಾರತೀಯ ವೈದ್ಯಕೀಯ ಮಂಡಳಿಯ ಆಕ್ಷೇಪಣೆಯನ್ನು ಸರಿಪಡಿಸಲು ರೇಡಿಯಾಲಜಿ ವಿಭಾಗಕ್ಕೆ ಅವಶ್ಯವಿರುವ 60ಎಂಎ ಉಪಕರಣಗಳನ್ನು ಹಾಗೂ ಎಕ್ಸ್‌ರೇಗೆ ಅವಶ್ಯವಿರುವ 02 ಡಿಜಿಟಲ್ ಕ್ಯಾಸೆಟ್ಸ್‌ಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಿಲು ಅನುಮತಿ ನೀಡುವ ಕುರಿತು. |
|---|---|

ಭಾರತೀಯ ವೈದ್ಯಕೀಯ ಮಂಡಳಿಯು ದಿನಾಂಕ 30.08.2017 ರಂದು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭೇಟಿ ನೀಡಿದ ಸಮಯದಲ್ಲಿ ರೇಡಿಯಾಲಜಿ ವಿಭಾಗದಲ್ಲಿ 02 – 60ಎಂಎ ಉಪಕರಣಗಳು ಲಭ್ಯವಿಲ್ಲವೆಂದು ನ್ಯೂನತೆಯನ್ನು ಗುರುತಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ಮುಂದಿನ ಪರಿವೀಕ್ಷಣೆಗೆ ಬರುವಷ್ಟರಲ್ಲಿ ಸದರಿ ರೇಡಿಯಾಲಜಿ ಉಪಕರಣಗಳನ್ನು ಖರೀದಿಸಿ ಅನುಪಾಲನ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ. ಹಾಗೂ ಎಕ್ಸರೇ ಸಂಬಂಧ 02 ಡಿಜಿಟಲ್ ಕ್ಯಾಸೆಟ್ಸ್‌ಗಳನ್ನು ಖರೀದಿಸಲು ಅಂದಾಜು ರೂ. 20.00 ಲಕ್ಷಗಳು ವೆಚ್ಚವಾಗುವ ಸಾಧ್ಯತೆಯಿರುತ್ತದೆ.

ರಿಮ್ಸ್ ಸಂಸ್ಥೆಯ ಲೆಕ್ಕ ಶಿರ್ಷಿಕೆ 2210–05–105–1–40–101 ಅಡಿಯಲ್ಲಿ 2013–14ನೇ ಸಾಲಿನಿಂದ 2015–16 ನೇ ಸಾಲಿನವರೆಗೆ ರೂ. 8,24,37,540/– ಗಳ ಅನುದಾನವು ಈ ಲೆಕ್ಕಶಿರ್ಷಿಕೆ ಅಡಿಯಲ್ಲಿ ಉಳಿತಾಯವಾಗಿದ್ದು, ಸದರಿ ಉಪಕರಣಗಳ ಖರೀದಿಗೆ ಸಂಬಂಧಿಸಿದ ವೆಚ್ಚವನ್ನು ಈ ಅನುದಾನದಿಂದ ಪಾವತಿಸಬಹುದಾಗಿರುತ್ತದೆ.

ಕಾರಣ ಭಾರತೀಯ ವೈದ್ಯಕೀಯ ಮಂಡಳಿಯ ಆಕ್ಷೇಪಣೆಯನ್ನು ಸರಿಪಡಿಸಲು ರೇಡಿಯಾಲಜಿ ವಿಭಾಗಕ್ಕೆ ಅವಶ್ಯವಿರುವ, 60ಎಂಎ ಉಪಕರಣಗಳನ್ನು ಹಾಗೂ ಎಕ್ಸ್‌ರೇ ಸಂಬಂಧ 02 ಡಿಜಿಟಲ್ ಕ್ಯಾಸೆಟ್ಸ್‌ಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಿಲು ಹಾಗೂ ಸದರಿ ಉಪಕರಣಗಳ ಖರೀದಿಗೆ ಸಂಬಂಧಿಸಿದ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210–05–105–1–40–101 ಅಡಿಯಲ್ಲಿ 2013–14ನೇ ಸಾಲಿನಿಂದ 2015–16 ನೇ ಸಾಲಿನವರೆಗೆ ಉಳಿತಾಯವಾಗಿರುವ ರೂ. 8,24,37,540/– ಗಳ ಅನುದಾನದಿಂದ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಭಾರತೀಯ ವೈದ್ಯಕೀಯ ಮಂಡಳಿಯ ಆಕ್ಷೇಪಣೆಯನ್ನು ಸರಿಪಡಿಸಲು ರೇಡಿಯಾಲಜಿ ವಿಭಾಗಕ್ಕೆ ಅವಶ್ಯವಿರುವ, ಎರಡು 60ಎಂಎ ಉಪಕರಣಗಳನ್ನು ಹಾಗೂ ಎಕ್ಸ್‌ರೇ ಸಂಬಂಧ 02 ಡಿಜಿಟಲ್ ಕ್ಯಾಸೆಟ್ಸ್‌ಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಖರೀದಿಸಿಲು ಅನುಮೋದನೆ ನೀಡಲಾಯಿತು.

ಹಾಗೂ ಲೆಕ್ಕ ಶಿರ್ಷಿಕೆ 2210–05–105–1–40–101 ಅಡಿಯಲ್ಲಿ ಬಿಡುಗಡೆ ಮಾಡಲಾಗುವ ಅನುದಾನವನ್ನು ವೇತನ ಮತ್ತು ಇತರ ವೆಚ್ಚಗಳಿಗೆ ಬಳಕೆ ಮಾಡಿಕೊಳ್ಳಲು ಅವಕಾಶವಿರುವುದರಿಂದ, ರೇಡಿಯಾಲಜಿ ವಿಭಾಗಕ್ಕೆ ಅವಶ್ಯವಿರುವ ಎರಡು 60ಎಂಎ ಉಪಕರಣಗಳನ್ನು ಹಾಗೂ ಎಕ್ಸ್‌ರೇ ಸಂಬಂಧ 02 ಡಿಜಿಟಲ್ ಕ್ಯಾಸೆಟ್ಸ್‌ಗಳನ್ನು ಖರೀದಿಸಲು ವೆಚ್ಚವಾಗುವ ಅನುದಾನವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸುವಂತೆ ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 09: | ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಸ್ಥಾನಿಕರಿಗೆ ಸಂಚಿತ ವೇತನವನ್ನು ಹೆಚ್ಚಿಸಲು ಹಾಗೂ ಬೋಧಕರು / ಕಿರಿಯ ಸ್ಥಾನಿಕರಿಗೆ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ವೇತನದನ್ವಯ ನಿಗದಿಪಡಿಸಿ ಪಾವತಿಸಲು ಅನುಮತಿ ನೀಡುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರು / ಕಿರಿಯ ಸ್ಥಾನಿಕರ ತಮ್ಮ ವೇತನವನ್ನು ರೂ. 29,000/– ದಿಂದ ರೂ. 40,000/– ಗಳಿಗೆ ಹೆಚ್ಚಿಸುವಂತೆ ಕೋರಿರುತ್ತಾರೆ. ಸದರಿಯವರಿಗೆ ಸರ್ಕಾರದ ಆದೇಶ ಸಂಖ್ಯೆ. ಆಕುಕ / 320 / ಎಂಎಂಇ / 2011 ದಿನಾಂಕ 16.10.2012 ರನ್ವಯ ಈ ಕೆಳಕಂಡಂತೆ ಸಂಚಿತ ವೇತನವನ್ನು ನಿಗದಿಪಡಿಸಿ ಪಾವತಿಸಲಾಗುತ್ತಿದೆ. ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಒಟ್ಟು 58 ಕಿರಿಯ ಸ್ಥಾನಿಕರು ಹಾಗೂ 31 ಬೋಧಕ ಹುದ್ದೆಗಳು ಸೇರಿ 89 ಹುದ್ದೆಗಳು ಮಂಜೂರಾಗಿರುತ್ತವೆ.

Director
RIMS, Raichur

ಮೊದಲನೇ ವರ್ಷ ಬೋಧಕರು / ಕಿರಿಯ ಸ್ಥಾನಿಕರಿಗೆ ನಿಗದಿಪಡಿಸಲಾದ ಸಂಚಿತ ವೇತನ ರೂ. 29,000/–
ಎರಡನೇ ವರ್ಷ ರೂ. 30,000/– ಗಳು
ಮೂರನೇ ವರ್ಷ ರೂ. 31,000/– ಗಳು

ಕಾರ್ಮಿಕ ಇಲಾಖೆಯ ಆದೇಶ ಸಂಖ್ಯೆ ಕೆಎಇ / 125 / ಎಲ್‌ಎಂಡಬ್ಲೂ / 2015 ದಿನಾಂಕ 06.01.2017 ರನ್ವಯ ಕಿರಿಯ ವೈದ್ಯರಿಗೆ Basic ರೂ. 40,000/– + ವಿಡಿಎ ರೂ. 1,276/– ಗಳು ಸೇರಿ ರೂ. 41,275/– ಗಳನ್ನು ಪಾವತಿಸುವಂತೆ ಆದೇಶ ಹೊರಡಿಸಲಾಗಿದ್ದು, ಕಾರ್ಮಿಕ ಇಲಾಖೆಯ ಆದೇಶದನ್ವಯ ಈಗಾಗಲೇ ಮಂಡ್ಯ, ಶಿವಮೊಗ್ಗ, ಬೀದರ್ ಮತ್ತು ಗದಗ ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿ ಬೋಧಕರು / ಕಿರಿಯ ಸ್ಥಾನಿಕರಿಗೆ Basic ರೂ. 40,000/– + ವಿಡಿಎ ರೂ. 1,276/– ಗಳು ಸೇರಿ ರೂ. 41,275/– ಗಳನ್ನು ಪಾವತಿಸಲಾಗುತ್ತಿದೆ.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅವಶ್ಯವಿರುವ 25 ಹಿರಿಯ ಸ್ಥಾನಿಕರನ್ನು ಈ ಹಿಂದೆ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಸದರಿಯವರಿಗೆ ರೂ. 40,000/– ಗಳ ಸಂಚಿತ ವೇತನವನ್ನು ನಿಗದಿಪಡಿಸಲಾಗಿತ್ತು. ಕಾರ್ಮಿಕ ಇಲಾಖೆಯ ನಿಯಮದಂತೆ ಕಿರಿಯ ಸ್ಥಾನಿಕರು ಹಾಗೂ ಬೋಧಕರಿಗೆ ರೂ. 41,275/– ಗಳನ್ನು ನಿಗದಿಪಡಿಸಬೇಕಾಗಿರುವುದರಿಂದ, ಕಿರಿಯ ಸ್ಥಾನಿಕರು ಹಾಗೂ ಬೋಧಕರು ಹಿರಿಯ ಸ್ಥಾನಿಕರಿಗಿಂತ ಹೆಚ್ಚಿನ ವೇತನವನ್ನು ಪಡೆದಂತಾಗುತ್ತದೆ. ಹಾಗೂ ಹಿರಿಯ ಸ್ಥಾನಿಕರನ್ನು ಖಾಯಂ ನೇಮಕಾತಿ ಮಾಡಿದಲ್ಲಿ ಸದರಿಯವರು ಸ್ನಾತಕೋತ್ತರ ವ್ಯಾಸಂಗದ ಸಂಬಂಧ ಸದರಿ ಹುದ್ದೆಗೆ ರಾಜೀನಾಮೆ ನೀಡಿ ಹೋಗುತ್ತಾರೆ. ಇದರಿಂದಾಗಿ ನಿವೃತ್ತಿ ಹೊಂದಿದ ಸ್ಥಳಿಯ ಸಿಬ್ಬಂದಿಗಳನ್ನೇ ರೂ. 50,000/– ಗಳ ಸಂಚಿತ ವೇತನವನ್ನು ನಿಗದಿಪಡಿಸಿ ನೇಮಕಾತಿ ಮಾಡಿಕೊಂಡಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ನ್ಯೂನತೆಯನ್ನು ಸಹ ಸರಿಪಡಿಸಿದಂತಾಗುತ್ತದೆ. ಈ ಹಿನ್ನಲೆಯಲ್ಲಿ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಸ್ಥಾನಿಕರಿಗೆ ರೂ. 50,000/– ಗಳ ಸಂಚಿತ ವೇತನವನ್ನು ಪ್ರತಿ ತಿಂಗಳು ಪ್ರತಿ ಸಿಬ್ಬಂದಿಗೆ ನಿಗದಿಪಡಿಸಿ ಪಾವತಿಸಿದಲ್ಲಿ ತುಂಬಾ ಅನುಕೂಲವಾಗುತ್ತದೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 89 ಬೋಧಕರು / ಕಿರಿಯ ಸ್ಥಾನಿಕರಿಗೆ ಕಾರ್ಮಿಕ ಇಲಾಖೆಯ ಆದೇಶ ಸಂಖ್ಯೆ ಕೆಎಇ / 125 / ಎಲ್‌ಎಂಡಬ್ಲೂ / 2015 ದಿನಾಂಕ 06.01.2017 ರನ್ವಯ ಪ್ರತಿ ಕಿರಿಯ ವೈದ್ಯರಿಗೆ Basic ರೂ. 40,000/– + ವಿಡಿಎ ರೂ. 1,276/– ಗಳು ಸೇರಿ ರೂ. 41,275/– ಗಳನ್ನು ದಿನಾಂಕ 01.04.2017 ರಿಂದ ನಿಗದಿಪಡಿಸಿ ಪಾವತಿಸುವ ಬಗ್ಗೆ ಹಾಗೂ ವ್ಯತ್ಯಾಸದ ಮೊತ್ತವನ್ನು ಲೆಕ್ಕ ಶಿರ್ಷಿಕೆ 2210–05–105–1–40–101 ಅಡಿಯಲ್ಲಿ ಉಳಿತಾಯವಾಗಿರುವ ರೂ. 8,24,37,540/– ಗಳ ಅನುದಾನದಿಂದ ಪಾವತಿಸಲು ಮತ್ತು ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಸ್ಥಾನಿಕರಿಗೆ ಪ್ರತಿ ತಿಂಗಳು ರೂ. 50,000/– ಗಳ ಸಂಚಿತ ವೇತನವನ್ನು ನಿಗದಿಪಡಿಸಿ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 89 ಬೋಧಕರು / ಕಿರಿಯ ಸ್ಥಾನಿಕರಿಗೆ ಕಾರ್ಮಿಕ ಇಲಾಖೆಯ ಆದೇಶ ಸಂಖ್ಯೆ ಕೆಎಇ / 125 / ಎಲ್‌ಎಂಡಬ್ಲೂ / 2015 ದಿನಾಂಕ 06.01.2017 ರನ್ವಯ ಪ್ರತಿ ಕಿರಿಯ ವೈದ್ಯರಿಗೆ ಕಾರ್ಮಿಕ ಇಲಾಖೆಯ ಕನಿಷ್ಟ ವೇತನ **Basic** ರೂ. 40,000/– + ವಿಡಿಎ ರೂ. 1,276/– ಗಳು ಸೇರಿ ರೂ. 41,275/– ಗಳನ್ನು ನಿಗದಿಪಡಿಸಿ ಪಾವತಿಸುವಂತೆ ಮತ್ತು ಪ್ರತಿ ಹಿರಿಯ ಸ್ಥಾನಿಕರಿಗೆ ಪ್ರತಿ ಮಾಹೆ ರೂ. 50,000/– ಗಳ ಸಂಚಿತ ವೇತನವನ್ನು ನಿಗದಿಪಡಿಸಿ ಪಾವತಿಸುವಂತೆ ಅನುಮೋದನೆ ನೀಡಲಾಯಿತು.

ರಿಮ್ಸ್ ಸಂಸ್ಥೆಯಲ್ಲಿ ಖಾಲಿಯಿರುವ ಎಲ್ಲಾ ಬೋಧಕ ಸಿಬ್ಬಂದಿ ಹುದ್ದೆಗಳನ್ನು ನಿಯಮಾನುಸಾರ ಅಧಿಸೂಚನೆ ಹೊರಡಿಸಿ, ಭರ್ತಿ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

Director
RIMS, Raichur

| ವಿಷಯ ಸೂಚಿ ಸಂಖ್ಯೆ – 10 : | ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 2017–18ನೇ ಸಾಲಿಗೆ ಅವಶ್ಯವಿರುವ ಕೆಮಿಕಲ್ಸ್, ಇಂಜೆಕ್ಷನ್ ಮತ್ತು ಸರ್ಜಿಕಲ್ ಐಟಂಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಅನುಮತಿ ನೀಡುವ ಕುರಿತು |
|---|---|

ರಿಮ್ಸ್ ಬೋಧಕ ಆಸ್ಪತ್ರೆಗೆ 2017–18ನೇ ಸಾಲಿಗೆ ಅವಶ್ಯವಿರುವ ಇಂಜೆಕ್ಷನ್, ಮಾತ್ರೆಗಳು, ಸರ್ಜಿಕಲ್ ಐಟಂಗಳು, ಕೆಮಿಕಲ್ಸ್ & ರಿಏಜೆಂಟ್ಸ್‌ಗಳನ್ನು ಸರಬರಾಜು ಮಾಡಲು ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ಪತ್ರ ಸಂಖ್ಯೆ ರಿಮ್ಸ್ / ಆರ್.ಜಿ.ಎಸ್.ಎಸ್.ಹೆಚ್ (ಓಪೆಕ್) / ಉಗ್ರಾಣ / 84 / 2017–18 ದಿನಾಂಕ 12.05.2017 ರನ್ವಯ, ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಮಿಣಿಶಾಸ್ತ್ರ ವಿಭಾಗ ಇವರು ದಿನಾಂಕ 10.05.2017 ರ ಪತ್ರದಲ್ಲಿ, ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರಿಂದ ಪತ್ರ ಸಂಖ್ಯೆ ರಿಮ್ಸ್ ಬೋಆರಾ / ಉಗ್ರಾಣ / 9 / 2017–18 ದಿನಾಂಕ 08.05.2017, ಪತ್ರ ಸಂಖ್ಯೆ ರಿಮ್ಸ್ ಬೋಆರಾ / ಉಗ್ರಾಣ / 10 / 2017–18 ದಿನಾಂಕ 09.05.2017 ಮತ್ತು ಪತ್ರ ಸಂಖ್ಯೆ ರಿಮ್ಸ್. ಬೋ.ಆ.ರಾ / ಉಗ್ರಾಣ – ವಿ / 2017–18 / 22 ದಿನಾಂಕ 24.06.2017 ರನ್ವಯ ಬೇಡಿಕೆ ಪತ್ರಗಳನ್ನು ವಿವಿಧ ದಿನಾಂಕಗಳಂದು ರಿಮ್ಸ್ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಅವುಗಳ ವಿವರರ ಈ ಕೆಳಗಿನಂತಿದೆ.

1) ಕೆಮಿಕಲ್ಸ್

ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು

| ಕ್ರಮ ಸಂಖ್ಯೆ | ಒಟ್ಟು ಕೆಮಿಕಲ್ಸ್ | ಅಂದಾಜು ಮೊತ್ತ | ಷರಾ |
|---|---|---|---|
| 01 | 640 | ರೂ. 60,89,041/– | |

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು

| ಕ್ರಮ ಸಂಖ್ಯೆ | ಒಟ್ಟು ಕೆಮಿಕಲ್ಸ್ | ಅಂದಾಜು ಮೊತ್ತ | ಷರಾ |
|---|---|---|---|
| 01 | 77 | ರೂ. 3,10,33,679/– | |

2) ಇಂಜೆಕ್ಷನ್ಸ್

| ಕ್ರಮ ಸಂಖ್ಯೆ | ಒಟ್ಟು ಇಂಜೆಕ್ಸನ್‌ಗಳು | ಅಂದಾಜು ಮೊತ್ತ | ಷರಾ |
|---|---|---|---|
| 01 | 107 | ರೂ. 1,67,37,714/– | |

3) ಮಾತ್ರೆಗಳು

| ಕ್ರಮ ಸಂಖ್ಯೆ | ಒಟ್ಟು ಮಾತ್ರೆಗಳು | ಅಂದಾಜು ಮೊತ್ತ | ಷರಾ |
|---|---|---|---|
| 01 | 83 | ರೂ. 76,79,402/– | |

4) ಸರ್ಜಿಕಲ್ ಐಟಂಗಳು

| ಕ್ರಮ ಸಂಖ್ಯೆ | ಒಟ್ಟು ಸರ್ಜಿಕಲ್ ಐಟಂಗಳು | ಅಂದಾಜು ಮೊತ್ತ | ಷರಾ |
|---|---|---|---|
| 01 | 394 | ರೂ. 2,35,00,266/– | |

Director
RIMS, Raichur

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಕೆಮಿಕಲ್ಸ್‌ಗಳನ್ನು ಖರೀದಿಸಲು ಅಂದಾಜು ರೂ. 3,10,33,679/- ಗಳ ಅವಶ್ಯಕತೆಯಿದ್ದು, ಸರ್ಕಾರದಿಂದ ಓಪೆಕ್ ಆಸ್ಪತ್ರೆಗೆ ಲೆಕ್ಕಶೀರ್ಷಿಕೆ 2210-01-110-2-37-103 ಅಡಿಯಲ್ಲಿ ಕಾಲಕಾಲಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಈ ಲೆಕ್ಕ ಶಿರ್ಷಿಕೆಯಲ್ಲಿ ಸದರಿ ಕೆಮಿಕಲ್ಸ್‌ಗಳನ್ನು ಖರೀದಿಸಲು ಬೇಕಾದ ಅನುದಾನವು ಲಭ್ಯವಿರುತ್ತದೆ.

ರಿಮ್ಸ್ ಸಂಸ್ಥೆಗೆ 2016-17 ಮತ್ತು 2017-18ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2210-05-105-1-54-103 (ಸಾಮಾನ್ಯ ವೆಚ್ಚ) ಅಡಿಯಲ್ಲಿ ಕೆಮಿಕಲ್ಸ್, ಮಾತ್ರೆಗಳು, ಸರ್ಜಿಕಲ್ ಐಟಂ ಮತ್ತು ಇಂಜೆಕ್ಷನ್ ಖರೀದಿಗೆ ಅನುದಾನವನ್ನು ಕಾಲಕಾಲಕ್ಕೆ ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತಿದ್ದು, ಅನುದಾನವು ಲಭ್ಯವಿರುತ್ತದೆ.

ರಿಮ್ಸ್ ಬೋಧಕ ಆಸ್ಪತ್ರೆ, ಮಿಣೇಶಾಸ್ತ್ರ ವಿಭಾಗ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 2017-18ನೇ ಸಾಲಿಗೆ ಅವಶ್ಯವಿರುವ ವಿವಿಧ 717 ವಿವಿಧ ಕೆಮಿಕಲ್ಸ್, 107 ವಿವಿಧ ಇಂಜೆಕ್ಷನ್, ವಿವಿಧ 83 ಮಾತ್ರೆಗಳು ಮತ್ತು ವಿವಿಧ 394 ವಿವಿಧ ಸರ್ಜಿಕಲ್ ಐಟಂಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಹಾಗೂ ಇದಕ್ಕೆ ವೆಚ್ಚವಾಗುವ ರಿಮ್ಸ್ ಬೋಧಕ ಆಸ್ಪತ್ರೆಯ ರೂ. 6,15,39,836/- ಗಳನ್ನು ರಿಮ್ಸ್ ಸಂಸ್ಥೆಗೆ 2016-17 ಮತ್ತು 2017-18ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2210-05-105-1-54-103 (ಸಾಮಾನ್ಯ ವೆಚ್ಚ) ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಿಂದ ಹಾಗೂ ಓಪೆಕ್ ಆಸ್ಪತ್ರೆಯ ಕೆಮಿಕಲ್ಸ್‌ಗಳನ್ನು ಲೆಕ್ಕಶೀರ್ಷಿಕೆ 2210-01-110-2-37-103 ಅಡಿಯಲ್ಲಿ ಖರೀದಿಸಲು ಬಿಡುಗಡೆಯಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆ, ಮಿಣೇಶಾಸ್ತ್ರ ವಿಭಾಗ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 2017-18ನೇ ಸಾಲಿಗೆ ಅವಶ್ಯವಿರುವ ವಿವಿಧ 717 ವಿವಿಧ ಕೆಮಿಕಲ್ಸ್, 107 ವಿವಿಧ ಇಂಜೆಕ್ಷನ್, ವಿವಿಧ 83 ಮಾತ್ರೆಗಳು ಮತ್ತು 394 ವಿವಿಧ ಸರ್ಜಿಕಲ್ ಐಟಂಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಖರೀದಿಸಲು ಸಭೆಯು ಅನುಮೋದನೆ ನೀಡಲಾಯಿತು. ಮತ್ತು ಇದಕ್ಕೆ ತಗುಲವ ವೆಚ್ಚ ರೂ. 6,15,39,836/- ಗಳನ್ನು ರಿಮ್ಸ್ ಸಂಸ್ಥೆಗೆ 2016-17 ಮತ್ತು 2017-18ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2210-05-105-1-54-103 (ಸಾಮಾನ್ಯ ವೆಚ್ಚ) ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಿಂದ ಹಾಗೂ ಓಪೆಕ್ ಆಸ್ಪತ್ರೆಗೆ ಸಂಬಂಧಿಸಿದ ಕೆಮಿಕಲ್ಸ್‌ಗಳನ್ನು ಲೆಕ್ಕಶೀರ್ಷಿಕೆ 2210-01-110-2-37-103 ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಿಂದ ಖರೀದಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 11 : | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ 2017-18ನೇ ಸಾಲಿಗೆ ಅವಶ್ಯವಿರುವ ಮುದ್ರಣ ಸಾಮಾಗ್ರಿಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಂದ ದಿನನಿತ್ಯದ ಬಳಕೆಗಾಗಿ 2017-18 ನೇ ಸಾಲಿಗೆ ಅವಶ್ಯವಿರುವ ಮುದ್ರಣ ಸಾಮಾಗ್ರಿಗಳನ್ನು ಪೂರೈಸುವಂತೆ ಕೋರಿ ಬೇಡಿಕೆ ಪತ್ರವು ಈ ಕಾರ್ಯಾಲಯಕ್ಕೆ ಸ್ವೀಕೃತವಾಗಿರುತ್ತವೆ.

| Raichur Institute of Medical Sciences, Raichur | | | | |
|---|---|---|---|---|
| Details of Required Printing Items for the Year 2017-18 | | | | |
| Sl. No | Name of the Printing items | Quantity | Rates | Total Amount |
| 1 | Progress Sheets OR Doctors Sheets ( A4-Size) Each Pad 100 Page- (54 Gsm A GradeMill Paper) | 5000 | 48 | 240000.00 |
| 2 | Nurses Chart ( A4-Size)Each Pad 100 Page)(54 Gsm A GradeMill Paper) | 2000 | 50 | 100000.00 |
| 3 | X-ray Forms ( 1/10 Size) Each Pad 100 Page)(54 Gsm A GradeMill Paper) | 3000 | 40 | 120000.00 |
| 4 | Blood Investigation Forms ( 1/8 Size)Each Pad 100 Page)(54 Gsm A GradeMill Paper) | 3200 | 40 | 128000.00 |
| 5 | Blood Requisition (Blood Bank) Forms ( 1/8 Size) Each Pad 100 Page)(54 Gsm A GradeMill Paper) | 1600 | 40 | 64000.00 |



Director
RIMS, Raichur

| | | | | |
|---|---|---|---|---|
| 6 | Referral (Higher Centre) Forms ( A4-Size )Each Pad 100 Page)(54 Gsm A GradeMill Paper) | 200 | 50 | [illegible]0000.00 |
| 7 | Discharge Summary Sheets ( A4-Size )Each Pad 100 Page)(54 Gsm A GradeMill Paper) | 1500 | 50 | 75000.00 |
| 8 | Police Intimation Forms (1/6 Size)Each Pad 100 Page)(54 Gsm A GradeMill Paper) | 300 | 40 | 12000.00 |
| 9 | X-ray Report Form ( A4-Size) Each Pad 100 Page)(54 Gsm A GradeMill Paper) | 100 | 40 | 4000.00 |
| 10 | CT Scan Report Form (MLC) ( A4-Size )Each Pad 100 Page)(54 Gsm A GradeMill Paper) | 100 | 50 | 5000.00 |
| 11 | CT Scan Report Form (Non-MLC) ( A4-Size ) Each Pad 100 Page)(54 Gsm A GradeMill Paper) | 100 | 50 | 5000.00 |
| 12 | Ultrasound Scaning Report Form (OBG) ( A4-Size )Each Pad 100 Page)(54 Gsm A GradeMill Paper) | 300 | 50 | 15000.00 |
| 13 | C .T. Scan Requisition form (54 Gsm A GradeMill Paper) | 200 | 50 | 10000.00 |
| 14 | CT Scan film Covers(14X17) Size | 2000 | 25 | 50000.00 |
| 15 | X-ray Patient Registration Ledgers ( Register) | 6 | 550 | 3300.00 |
| 16 | CT Scan Patient Registration Ledgers ( Register) | 4 | 550 | 2200.00 |
| 17 | Ultrasound Scanning Report Form (Abdomen)( A4-Size ) Each Pad 100 Page) | 400 | 50 | 20000.00 |
| 18 | Ultrasound Scan patient Empty ledger | 6 | 550 | 3300.00 |
| 19 | Pathology Requisition Forms ( A4-Size ) Each Pad 100 Page) | 50 | 50 | 2500.00 |
| 20 | Microbiology Requisition Forms ( A4-Size ) Each Pad 100 Page) | 50 | 50 | 2500.00 |
| 21 | Scaning Requisition Forms ( A4-Size ) Each Pad 100 Page) | 50 | 50 | 2500.00 |
| 22 | Histo Pathology Requisition Forms ( A4-Size )Each Pad 100 Page) | 300 | 50 | 15000.00 |
| 23 | FNAC Requisition Forms ( A4-Size )Each Pad 100 Page) | 1100 | 50 | 55000.00 |
| 24 | O.T List Requisition Forms ( A4-Size )Each Pad 100 Page) | 200 | 50 | 10000.00 |
| 25 | O.T.Cansent For Surgery form ( A4-Size )Each Pad 100 Page) | 30 | 50 | 1500.00 |
| 26 | High risk Consent Forms ( A4-Size ) Each Pad 100 Page) | 30 | 50 | 1500.00 |
| 27 | I/O Charts (Intara/ Out put) ( A4-Size ) Each Pad 100 Page) | 30 | 50 | 1500.00 |
| 28 | TPR & BP Chart Forms ( A4-Size ) Each Pad 100 Page) | 50 | 50 | 2500.00 |
| 29 | Diabetic Chart ( A4-Size ) Each Pad 100 Page) | 200 | 50 | 10000.00 |
| 30 | Death Forms Slips ( A4-Size ) Each Pad 100 Page) | 500 | 50 | 25000.00 |
| 31 | Diet Registers ( 600 Pages) Ledger Paper As per specimen Size | 50 | 550 | 27500.00 |
| 32 | Diet Entry Book( A4-Size ) Each Pad 100 Page) | 200 | 50 | 10000.00 |
| 33 | Indent Book( Long 1/6 Size Perforated in Center Each Pad 100 Page) | 500 | 40 | 20000.00 |
| 34 | Pre Anesthetic evaluation Form ( A4-Size ) Each Pad 100 Page) | 100 | 50 | 5000.00 |
| 35 | Anesthesia cases Register ( 600 Pages) Ledger Paper As per specimen Size | 10 | 550 | 5500.00 |
| 36 | Informed Consent form ( A4-Size ) Each Pad 100 Page) | 100 | 50 | 5000.00 |
| 37 | Monthly Cases Static Forms ( A4-Size ) Each Pad 100 Page) | 100 | 50 | 5000.00 |
| 38 | Master register ( 200 Pages) Ledger Paper As per specimen Size | 10 | 550 | 5500.00 |
| 39 | Drugs Expenditure Register ( 200 Pages) Ledger Paper As per specimen Size | 10 | 550 | 5500.00 |
| 40 | Refraction Prescription Pads ( 1/8-Size ) Each Pad 100 Page) | 500 | 40 | 20000.00 |
| 41 | Blood Donor Questionaire and Consent form( A4-Size Both Side Each Pad 100 Page) | 200 | 120 | 24000.00 |
| 42 | Blood Grouping registers ( 600 Pages) Ledger Paper As per specimen Size | 30 | 650 | 19500.00 |
| 43 | Certificates ( Blood Doner As per specimen card & Size ) | 10000 | 8 | 80000.00 |
| 44 | Donor Registers ( 600 Pages) Ledger Paper As per specimen Size | 30 | 650 | 19500.00 |
| 45 | Issue Registers ( 600 Pages) Ledger Paper As per specimen Size | 30 | 650 | 19500.00 |
| 46 | Accsident Register ( 600 Pages) Ledger Paper As per specimen Size | 50 | 800 | 40000.00 |
| 47 | Laboure Room Register ( 300 Pages) Ledger Paper As per specimen Size | 50 | 650 | 32500.00 |
| 48 | Birth Register ( 300 Pages) Ledger Paper As per specimen Size | 25 | 650 | 16250.00 |
| 49 | Death Rerister ( 300 Pages) Ledger Paper As per specimen Size | 15 | 650 | 9750.00 |
| 50 | Physical fitness certificate form ( A4-Size ) Each Pad 100 Page) | 500 | 50 | 25000.00 |
| 51 | Wound certificate form ( A4-Size ) Each Pad 100 Page) | 500 | 50 | 25000.00 |
| 52 | Radiology certificate form ( A4-Size ) Each Pad 100 Page) | 500 | 50 | 25000.00 |
| 53 | Postage Envelope –Cover 11X 4 | 2000 | 2 | 4000.00 |
| 54 | Visiting card 90X55 mm | 50000 | 0.5 | 25000.00 |
| 55 | Spring File | 2000 | 60 | 120000.00 |
| 56 | Tag File | 2000 | 30 | 60000.00 |
| 57 | Paper File | 10000 | 12 | 120000.00 |
| 58 | Urgent file | 6000 | 30 | 180000.00 |
| 59 | **Stock Registers:** | | | |
| | 1. Anti Sera ( 600 Pages Register Ledger Paper As per specimen Size | 10 | 550 | 5500.00 |
| | 2. Blood Bags Registers ( 600 Pages) Ledger Paper As per specimen Size | 10 | 550 | 5500.00 |



Director
RIMS, Raichur

| | | | | |
|---|---|---|---|---|
| | 3. Diagnostic Kit ( 600 Pages) Ledger Paper As per specimen Size | 10 | 550 | 5500.00 |
| | 4.Daily Stock Registers ( 600 Pages) Ledger Paper As per specimen Size | 10 | 550 | 5500.00 |
| 60 | TTD Registers( 400 Pages) Ledger Paper Crown 1/2 Size (70GSM Paper) | 10 | 550 | 5500.00 |
| 61 | Discard Registers ( 400 Pages) Ledger Paper Crown 1/2 Size (70GSM Paper) | 10 | 550 | 5500.00 |
| 62 | Daily Kit Expenditure Registers ( 400 Pages) Ledger Paper As per specimen Size | 10 | 550 | 5500.00 |
| 63 | Component Registers ( 400 Pages) Ledger Paper As per specimen Size | 10 | 550 | 5500.00 |
| 64 | Temperature Registers ( 400 Pages) Ledger Paper As per specimen Size | 10 | 550 | 5500.00 |
| 65 | Histopathology Report Forms ( A4-Size) Each Pad 100 Page) | 200 | 50 | 10000.00 |
| 66 | FNAC Report Forms ( A4-Size) Each Pad 100 Page) | 1000 | 50 | 50000.00 |
| 67 | Haematology Requisition Forms ( A4-Size) Each Pad 100 Page) | 1000 | 50 | 50000.00 |
| 68 | Slide Labels( As per specimen Size | 10000 | 5 | 50000.00 |
| 69 | Haematology Report Matter Register ( 400 Pages Ledger Paper As per specimen Size) | 40 | 550 | 22000.00 |
| 70 | Fluids Reports Register ( 200 Pages) Ledger Paper As per specimen Size | 40 | 550 | 22000.00 |
| 71 | Fluid Analysis form ( A4-Size) Each Pad 100 Page) | 100 | 50 | 5000.00 |
| 72 | FNAC Report Registers ( 200 Pages) Ledger Paper As per specimen Size | 40 | 550 | 22000.00 |
| 73 | Fluids Reports Register ( 600 Pages) Ledger Paper As per specimen Size | 10 | 550 | 5500.00 |
| 74 | FNAC Report Registers ( 600 Pages) Ledger Paper As per specimen Size | 10 | 550 | 5500.00 |
| 75 | Pap Report Registers ( 200 Pages) Ledger Paper As per specimen Size | 50 | 550 | 27500.00 |
| 76 | Pap Report Registers ( 600 Pages) Ledger Paper As per specimen Size | 5 | 550 | 2750.00 |
| 77 | Histopathology Registers ( 200 Pages) Ledger Paper As per specimen Size | 50 | 550 | 27500.00 |
| 78 | Urine Report Registers ( 200 Pages) Ledger Paper As per specimen Size | 100 | 550 | 55000.00 |
| 79 | Urine Report Registers ( A4-Size) Each Pad 100 Page) | 100 | 50 | 5000.00 |
| 80 | Semen Analysis Report Registers ( 200 Pages) Ledger Paper As per specimen Size | 40 | 550 | 22000.00 |
| 81 | Semen Analysis Report Registers ( A4-Size) Each Pad 100 Page) | 100 | 50 | 5000.00 |
| 82 | Bone Marrow Report Registers ( 200 Pages) Ledger Paper As per specimen Size | 40 | 550 | 22000.00 |
| 83 | Bone Marrow Report form ( A4-Size) Each Pad 100 Page) | 50 | 50 | 2500.00 |
| 84 | Postmortem Examination Report Form ( 1/2-Size ) Both Side Printing Each Pad 100 Page) | 200 | 300 | 60000.00 |
| 85 | Viscera Forms – RFSL Kalaburagi ( A4-Size) Each Pad 100 Page) | 200 | 50 | 10000.00 |
| 86 | Viscera Forms –FSL Hyderabad ( A4-Size) Each Pad 100 Page) | 200 | 50 | 10000.00 |
| 87 | Viscera Labels ( A4-Size Perforated in 3 Colums Center Each Pad 100 Page) | 50 | 120 | 6000.00 |
| 88 | Sexual assault examination report form ( 1/2-Size ) Both Side Printing Each Pad 100 Page) | 50 | 300 | 15000.00 |
| 89 | Sexual assault labeling of articles format ( A4-Size Perforated in 3 Colums Center Each Pad 100 Page) | 20 | 120 | 2400.00 |
| 90 | Final opinion formats ( A4-Size) Each Pad 100 Page) | 50 | 50 | 2500.00 |
| 91 | Microbiology Requisition Sheets | | | |
| 92 | 1. Yellow ( A4-Size) Each Pad 100 Page) | 100 | 60 | 6000.00 |
| 93 | 2. Blue ( A4-Size Perforated in Center Each Pad 100 Page) | 200 | 60 | 12000.00 |
| 94 | 3.White ( A4-Size) Each Pad 100 Page) | 100 | 60 | 6000.00 |
| 95 | Compatibility Cards | | | |
| | A – As per specimen Size colour card Yellow ( Both Side Printing ) | 10000 | 3 | 30000.00 |
| | B – As per specimen Size colour card Pink ( Both Side Printing ) | 10000 | 3 | 30000.00 |
| | AB – As per specimen Size colour card White ( Both Side Printing ) | 10000 | 3 | 30000.00 |
| | O - As per specimen Size colour card Blue ( Both Side Printing ) | 10000 | 3 | 30000.00 |

| | | | | | | | | |
|---|---|---|---|---|---|---|---|---|
| 96 | Labels (Blood Group in colour Stickers As per specimen Size) | A+ | B+ | AB+ | O | | | |
| | 1.WB | 10000 | 10000 | 10000 | 10000 | | 2 | 20000.00 |
| | 2.PRBC | 10000 | 10000 | 10000 | 10000 | | 2 | 20000.00 |
| | 3.PLATLET | 10000 | 10000 | 10000 | 10000 | | 2 | 20000.00 |
| | 4. FFP | 5000 | 5000 | 5000 | 5000 | | 2 | 10000.00 |
| | 5. CRYO | 5000 | 5000 | 5000 | 5000 | | 2 | 10000.00 |
| | Grand Total | | | | | | | 2740950.00 |



Director
RIMS, Raichur

ಸದರಿ ಬೇಡಿಕೆ ಪತ್ರಗಳ್ನು ಪರಿಶೀಲಿಸಿ, ವಿವಿಧ ವಿಭಾಗಗಳಿಂದ ಸ್ವೀಕೃತವಾಗಿರುವ ಬೇಡಿಕೆ ಪತ್ರಗಳನ್ನು ಪರಿಶೀಲಿಸಿ ಮುದ್ರಣ ಸಾಮಾಗ್ರಿಗಳನ್ನು ಪಟ್ಟಿ ಮಾಡಲಾಗಿರುತ್ತದೆ. ಸದರಿ ಮುದ್ರಣ ಸಾಮಾಗ್ರಿಗಳನ್ನು ಖರೀದಿಸಲು ರೂ. 27.40 ಲಕ್ಷಗಳ ವೆಚ್ಚವಾಗಲಿದ್ದು, ಇದಕ್ಕೆ ತಗುಲುವ ವೆಚ್ಚವನ್ನು ಭರಿಸಲು ಈ ಸಂಸ್ಥೆಯ ಲೆಕ್ಕಶೀರ್ಷಿಕೆ 2210-05-105-1-54-103 (ಸಾಮಾನ್ಯ ವೆಚ್ಚ) ಅಡಿಯಲ್ಲಿ ಅನುದಾನವು ಲಭ್ಯವಿರುತ್ತದೆ. ಸದರಿ ಪ್ರಸ್ತಾವನೆಯನ್ನು ಏಕಕಡತದಲ್ಲಿ ಸಿದ್ದಪಡಿಸಿ, ಸರ್ಕಾರಕ್ಕೆ ಸಲ್ಲಿಸಲಾಗಿ, ಸರ್ಕಾರವು ಟೆಂಡರ್ ಪ್ರಕ್ರಿಯೆಗೆ ಅನುಮೋದನೆಯನ್ನು ನೀಡಿದ್ದು, ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆಯನ್ನು ಪಡೆದು ಕೊಳ್ಳುವಂತೆ ಸೂಚಿಸಲಾಗಿರುತ್ತದೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ 2017-18ನೇ ಸಾಲಿಗೆ ಅವಶ್ಯವಿರುವ ಮುದ್ರಣ ಸಾಮಾಗ್ರಿಗಳನ್ನು ಮುದ್ರಿಸಿ ಖರೀದಿಸಿ ಪೂರೈಸಲು ಟೆಂಡರ್‌ನ್ನು ಆಹ್ವಾನಿಸಲು ಹಾಗೂ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-54 ಅಡಿಯಲ್ಲಿ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ 2017-18ನೇ ಸಾಲಿಗೆ ಅವಶ್ಯವಿರುವ ಮುದ್ರಣ ಸಾಮಾಗ್ರಿಗಳನ್ನು ಪೂರೈಸುವ ಬಗ್ಗೆ ಟೆಂಡರ್‌ನ್ನು ಅಹ್ವಾನಿಸಲು ಅನುಮೋದನೆ ನೀಡಲಾಯಿತು. ಹಾಗೂ ಆಸ್ಪತ್ರೆಯಲ್ಲಿ ಅದಷ್ಟು ತ್ವರಿತವಾಗಿ ಇ - ಹಾಸ್ಪಿಟಲ್‌ನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿ, ಮುದ್ರಣ ಸಾಮಾಗ್ರಿಗಳನ್ನು ಖರೀದಿಸಲು ಆಗುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-54 ಅಡಿಯಲ್ಲಿ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ - 12 : | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಗೆ 2017-18ನೇ ಸಾಲಿಗೆ ಅವಶ್ಯವಿರುವ ವಿವಿಧ ಲೇಖನ ಸಾಮಾಗ್ರಿಗಳನ್ನು ಖರೀದಿಸಿ ಪೂರೈಸಲು ಪೂರ್ಣಾವಧಿಯ ಟೆಂಡರ್‌ನ್ನು ಆಹ್ವಾನಿಸುವುದು ಅವಶ್ಯಕತೆಯಿದ್ದು, ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ವಿವಿಧ ಒಟ್ಟು 65 ಐಟಂಗಳ ಲೇಖನ ಸಾಮಾಗ್ರಿಗಳನ್ನು ಪೂರೈಸುವಂತೆ ಕೋರಿ ವಿವಿಧ ವಿಭಾಗಗಳಿಂದ ಬೇಡಿಕೆ ಪತ್ರಗಳು ಈ ಕಾರ್ಯಾಲಯಕ್ಕೆ ಸ್ವೀಕೃತವಾಗಿದ್ದು, ವಿಭಾಗಗಳಿಗೆ ಅವಶ್ಯವಿರುವ ಲೇಖನ ಸಾಮಾಗ್ರಿಗಳ ವಿವರ ಈ ಕೆಳಗಿನಂತಿದೆ.

## Raichur Institute of Medical Sciences, Raichur
## Details of Required stationary Items for the Year 2017-18

| Sl. No | ITEMS NAME | REQUIRED QTY | Estimate RATES | Total Amount |
|---|---|---|---|---|
| 1 | White Papers (A4 size) 70 GSM | 700 | 160 | 112000.00 |
| 2 | Legal Size Paper | 20 | 200 | 4000.00 |
| 3 | A3- Size Papers | 3 | 300 | 900.00 |
| 4 | Writing Paper's ( Plain) | 600 | 150 | 90000.00 |
| 5 | Long size Registers – 600 Pages | 300 | 140 | 42000.00 |
| 6 | Long size Registers– 400 Pages | 300 | 100 | 30000.00 |



Director
RIMS, Raichur

| | | | | |
|---|---|---|---|---|
| 7 | Long size Registers-- 200 Pages | 300 | 60 | 18000.00 |
| 8 | Long size Registers– 300 Pages | 200 | 80 | 16000.00 |
| 9 | Long size Registers– 100 Pages | 200 | 35 | 7000.00 |
| 10 | Long Register – 500 page | 200 | 120 | 24000.00 |
| 11 | Attendance Registers (staff ) 100 Pages | 100 | 50 | 5000.00 |
| 12 | Student Attendance Registers – 100 pages | 200 | 50 | 10000.00 |
| 13 | Small size Note Books – 200 pages | 200 | 30 | 6000.00 |
| 14 | Gund Pins | 300 | 27 | 8100.00 |
| 15 | Tags | 500 Bundle | 15 | 7500.00 |
| 16 | Carbon Sheets | 50 Box | 160 | 8000.00 |
| 17 | Pencil | 100 box | 32 | 3200.00 |
| 18 | Gum Bottle ( 150 ml) | 200 | 20 | 4000.00 |
| 19 | Stapler Pins ( Small ) | 300 | 7 | 2100.00 |
| 20 | Stapler Machine – Big | 60 | 15 | 900.00 |
| 21 | Stapler – Small ( No-10) | 50 | 45 | 2250.00 |
| 22 | Stapler – Big ( HD-45 ) | 25 | 90 | 2250.00 |
| 23 | Stapler pin – Big | 100 box | 15 | 1500.00 |
| 24 | Stainless steel Poker | 25 | 30 | 750.00 |
| 25 | Stainless Steel Scales | 25 | 25 | 625.00 |
| 26 | Whitener Pen | 100 | 25 | 2500.00 |
| 27 | Eraser | 50 | 2 | 100.00 |
| 28 | Chalk Pencil Box – white | 200 | 65 | 13000.00 |
| 29 | Chalk Pencil Box – colour | 100 | 80 | 8000.00 |
| 30 | Dusters | 25 | 20 | 500.00 |
| 31 | Notice Board (3 x 2) | 10 | 2250 | 22500.00 |
| 32 | Photo Paper (A4 size) | 500 Pieces | 2 | 1000.00 |
| 33 | Ink Pad (160 mm X 97 mm) | 100 | 50 | 5000.00 |
| 34 | Pen Box – 100 pack (Blue) | 20 Box | 40 | 800.00 |
| 35 | OHP Marker Pen | 100 | 25 | 2500.00 |
| 36 | White Board Marker Pen | 25 | 30 | 750.00 |
| 37 | Sketch pen | 15 | 40 | 600.00 |
| 38 | Red Pen (Use & Through) | 5 | 20 | 200.00 |
| 39 | Hole Punch | 10 | 60 | 600.00 |
| 40 | Punch (Single Punch) | 25 | 55 | 1375.00 |
| 41 | Big Size Punch | 10 | 200 | 2000.00 |
| 42 | Tray (Plastic) | 15 | 80 | 1200.00 |

Director
RIMS, Raichur

| | | | | |
|---|---|---|---|---|
| 43 | Calling Bell | 20 | 120 | 2400.00 |
| 44 | Box File – Big | 200 | 80 | 16000.00 |
| 45 | Calculator | 10 | 200 | 2000.00 |
| 46 | CD (Blank) | 200 | 10 | 2000.00 |
| 47 | DVD (Blank) | 100 | 20 | 2000.00 |
| 48 | Brown Adhesive tape (3") | 100 | 40 | 4000.00 |
| 49 | White Type (3") | 10 | 50 | 500.00 |
| 50 | White Board Duster | 25 | 80 | 2000.00 |
| 51 | Pen Drive – 8GB | 25 | 500 | 12500.00 |
| 52 | Pen Drive – 16GB | 10 | 600 | 6000.00 |
| 53 | Notice board pins | 10 box | 50 | 500.00 |
| 54 | Scissors - Big Size | 50 | 80 | 4000.00 |
| 55 | Scissors - Small Size | 25 | 50 | 1250.00 |
| 56 | Seal Wax | 10 | 50 | 500.00 |
| 57 | Green Pens | 100 | 60 | 6000.00 |
| 58 | High Lighter Pen (Green Colour) | 25 | 25 | 625.00 |
| 59 | Big Tag | 100 | 40 | 4000.00 |
| 60 | Ink Bottle | 50 | 40 | 2000.00 |
| 61 | Postage Envelope – A4 size ( brown) | 200 | 4 | 800.00 |
| 62 | Postage Envelope – A4 size ( Cloth ) | 200 | 6 | 1200.00 |
| 63 | Postage Envelope – Legal size ( Cloth ) | 200 | 8 | 1600.00 |
| 64 | Postage Envelope – A3 size ( Cloth ) | 100 | 10 | 1000.00 |
| 65 | Brown colour postage envelope | 100 | 2 | 200.00 |
| | Grand Total | | | 541775.00 |

ಸದರಿ ಬೇಡಿಕೆ ಪತ್ರಗಳ್ನು ಪರಿಶೀಲಿಸಿ, ವಿವಿಧ ವಿಭಾಗಗಳಿಂದ ಸ್ವೀಕೃತವಾಗಿರುವ ಬೇಡಿಕೆ ಪತ್ರಗಳನ್ನು ಪರಿಶೀಲಿಸಿ ಅವಶ್ಯವಿರುವ ಲೇಖನ ಸಾಮಾಗ್ರಿಗಳನ್ನು ಪಟ್ಟಿ ಮಾಡಲಾಗಿರುತ್ತದೆ. ಸದರಿ ಲೇಖನ ಸಾಮಾಗ್ರಿಗಳನ್ನು ಖರೀದಿಸಲು ರೂ. 5,41,775/– ಲಕ್ಷಗಳು ವೆಚ್ಚವಾಗಲಿದ್ದು, ರಿಮ್ಸ್ ಸಂಸ್ಥೆಯ ಲೆಕ್ಕಶಿರ್ಷಿಕೆ 2210–05–105–1–54– 101 ಕಚೇರಿ ಮತ್ತು ಇತರ ವೆಚ್ಚದಡಿಯಲ್ಲಿ ಕಾಲಕಾಲಕ್ಕೆ ಅನುದಾನವು ಸರ್ಕಾರದಿಂದ ಬಿಡುಗಡೆಯಾಗುತ್ತಿದ್ದು, ಈ ಲೆಕ್ಕಶಿರ್ಷಿಕೆ ಅಡಿಯಲ್ಲಿ ಸದರಿ ವೆಚ್ಚವನ್ನು ಭರಿಸಬಹುದಾಗಿರುತ್ತದೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆ ಮತ್ತು ವಿವಿಧ ವಿಭಾಗಗಳಿಗೆ 2017–18ನೇ ಸಾಲಿಗೆ ಅವಶ್ಯವಿರುವ ಲೇಖನ ಸಾಮಾಗ್ರಿಗಳನ್ನು ನಿಯಮಾನುಸಾರ ಪೂರೈಸಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ 15 ದಿನಗಳ ಕಾಲಾವಕಾಶ ನೀಡಿ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವಂತೆ ಹಾಗೂ ಈ ವೆಚ್ಚವನ್ನು ಲೆಕ್ಕಶಿರ್ಷಿಕೆ 2210–05–105–1–54–103 ಅಡಿಯಲ್ಲಿ ಬಿಡುಗಡೆಯಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

Director
RIMS, Raichur

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆ ಮತ್ತು ವಿವಿಧ ವಿಭಾಗಗಳಿಗೆ 2017-18ನೇ ಸಾಲಿಗೆ ಅವಶ್ಯವಿರುವ ಲೇಖನ ಸಾಮಾಗ್ರಿಗಳನ್ನು ನಿಯಮಾನುಸಾರ ಪೂರೈಸಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ 15 ದಿನಗಳ ಕಾಲಾವಕಾಶ ನೀಡಿ ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು ಲೆಕ್ಕಶೀರ್ಷಿಕೆ 2210-05-105-1-54-103 ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ - 13 : | 2017-18 ನೇ ಸಾಲಿಗೆ ರಿಮ್ಸ್ ಬೋಧಕ ಆಸ್ಪತ್ರೆಯ ಒಳರೋಗಿಗಳಿಗೆ ಅವಶ್ಯವಿರುವ ಪಥ್ಯಾಹಾರ ಮತ್ತು ಆಸ್ಪತ್ರೆಯ ಅವಶ್ಯಕ ವಸ್ತುಗಳನ್ನು ಖರೀದಿಸಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

ರಿಮ್ಸ್ ನೂತನ ಬೋಧಕ ಆಸ್ಪತ್ರೆಗೆ 2016-17ನೇ ಸಾಲಿಗೆ ಅವಶ್ಯವಿರುವ ಪಥ್ಯಾಹಾರ ಮತ್ತು ಆಸ್ಪತ್ರೆಯ ಅವಶ್ಯಕ ವಸ್ತುಗಳನ್ನು ಪೂರೈಸಲು ಈ ಹಿಂದೆ ನಿಯಮಾನುಸಾರ ಟೆಂಡರನ್ನು ಆಹ್ವಾನಿಸಿ ದಿನಾಂಕ 01.11.2016 ರಿಂದ ದಿನಾಂಕ 31.10.2017 ರವರೆಗೆ ಒಂದು ವರ್ಷದ ಅವಧಿಗೆ ಗುತ್ತಿಗೆಯನ್ನು ನಿಗದಿಪಡಿಸಲಾಗಿರುತ್ತದೆ. ಸದರಿಯವರ ಒಂದು ವರ್ಷದ ಗುತ್ತಿಗೆ ಅವಧಿಯು ದಿನಾಂಕ 31.10.2017 ರಂದು ಪೂರ್ಣಗೊಳ್ಳುತ್ತದೆ.

ಟೆಂಡರ್ ಅವಧಿ ಮುಕ್ತಾಯಗೊಳ್ಳುವುದರೊಳಗಾಗಿ ಆಸ್ಪತ್ರೆಗೆ ಚಿಕಿತ್ಸೆ ಬಯಸಿ ಬರುವ ರೋಗಿಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ಮುಂದಿನ ಅವಧಿಗೆ ಹೊಸ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಉಪ ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರು ಪತ್ರ ಸಂಖ್ಯೆ. ರಿಮ್ಸ್ / ಬೋಆರಾ / ಆಹಾರ / 2017-18 ದಿನಾಂಕ 19.07.2017 ರನ್ವಯ 2017-18 ನೇ ಸಾಲಿಗೆ ಅವಶ್ಯವಿರುವ ಪಥ್ಯಾಹಾರ ಮತ್ತು ಅವಶ್ಯ ವಸ್ತುಗಳ ವಾರ್ಷಿಕ ಅಂದಾಜು ಪಟ್ಟಿಯನ್ನು ದಿನಾಂಕ 03.08.2017 ರಂದು ರಿಮ್ಸ್ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಕಾರಣ 2017-18 ನೇ ಸಾಲಿಗೆ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಆಹಾರ ಪದಾರ್ಥ ಹಾಗೂ ಆಸ್ಪತ್ರೆಯ ಅವಶ್ಯ ವಸ್ತುಗಳನ್ನು ಪೂರೈಸಿಕೊಳ್ಳಲು ಕೆ.ಟಿ.ಪಿ.ಪಿ ನಿಯಾಮಾವಳಿಯನ್ವಯ ಟೆಂಡರ್‌ನ್ನು ಆಹ್ವಾನಿಸಲು ಹಾಗೂ ಈ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210-05-105-1-54 ಅಡಿಯಲ್ಲಿ ಭರಿಸಲು ಅನುಮತಿ ನೀಡುವಂತೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

2017-18 ನೇ ಸಾಲಿಗೆ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಆಹಾರ ಪದಾರ್ಥ ಹಾಗೂ ಆಸ್ಪತ್ರೆಯ ಅವಶ್ಯ ವಸ್ತುಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ನಿಯಾಮಾವಳಿಯನ್ವಯ ಖರೀದಿಸಲು ಸಭೆಯು ಅನುಮೋದನೆ ನೀಡಲಾಯಿತು ಹಾಗೂ ಈ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210-05-105-1-54 ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಿಂದ ಭರಿಸುವಂತೆ ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ - 14: | ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಒಟ್ಟು 272 ಹವಾನಿಯಂತ್ರಕಗಳಿಗೆ ಸಿ.ಎಂ.ಸಿ ನೀಡುವ ಸಂಬಂಧ ಅಲ್ಪಾವಧಿ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಬಗ್ಗೆ. |

ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಬೋದಕ ಆಸ್ಪತ್ರೆಯಲ್ಲಿ ಒಟ್ಟು 272 ಹವಾನಿಯಂತ್ರಕಗಳನ್ನು ಅಳವಡಿಸಲಾಗಿದ್ದು, ಅವುಗಳ ವಾರೆಂಟಿ ಅವಧಿಯು ಮುಕ್ತಾಯಗೊಂಡಿರುವುದರಿಂದ, ಪದೇ ಪದೇ ದುರಸ್ಥಿಗೆ ಬರುತ್ತಿವೆ. ಈ



Director
RIMS, Raichur

ಹಿನ್ನಲೆಯಲ್ಲಿ ಅವುಗಳ ದುರಸ್ಥಿಯನ್ನು ಮಾಡಲು 05 ವರ್ಷಗಳಿಗೆ ಸಿ.ಎಂ.ಸಿ ಯನ್ನು ನೀಡಿದಲ್ಲಿ ಯಾವುದೇ ಅಡೆತಡೆಯಿಲ್ಲದೇ ಕಾರ್ಯನಿರ್ವಹಿಸುತ್ತವೆ. ಮತ್ತು ಆಡಳಿತಾತ್ಮಕ ತೊಂದರೆಯನ್ನು ಸಹ ನಿವಾರಿಸಿದಂತಾಗುತ್ತದೆ. ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಬೋದಕ ಆಸ್ಪತ್ರೆಯಲ್ಲಿ ಅಳವಡಿಸಲಾಗಿರುವ ಒಟ್ಟು ಹವಾ ನಿಯಂತ್ರಕಗಳ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ವಿಭಾಗದ ಹೆಸರು | ಅಳವಡಿಸಲಾಗಿರುವ ಹವಾನಿಯಂತ್ರಗಳ ಸಂಖ್ಯೆ |
|---|---|---|
| 01 | ಓ.ಪಿ.ಡಿ ಕೌಂಟರ್ | 01 |
| 02 | ಎರ್ಮಜೆನ್ಸಿ Causuvalty | 04 |
| 03 | ಇ – ಲ್ಯಾಬ್ | 02 |
| 04 | Causuvalty | 05 |
| 05 | C.M.O | 05 |
| 06 | ಎ–ಕ್ಷರೇ | 08 |
| 07 | ಪ್ರಾಧ್ಯಾಪಕರು | 01 |
| 08 | ಸಹ ಪ್ರಾಧ್ಯಾಪಕರು | 01 |
| 09 | ಅಲ್ಟ್ರಾ ಸೌಂಡ್ | 01 |
| 10 | ಕಲರ್ ಡಾಪುಲರ್ | 01 |
| 11 | ಸಿಟಿ ಸ್ಕ್ಯಾನ್ ಕೊಠಡಿ | 08 |
| 12 | ವೈದ್ಯಕೀಯ ಅಧೀಕ್ಷಕರ ಕೊಠಡಿ | 01 |
| 13 | ಸಿಸಿಟಿವಿ ಕೊಠಡಿ | 02 |
| 14 | ಉಪ ವೈದ್ಯಕೀಯ ಅಧೀಕ್ಷಕರ ಕೊಠಡಿ | 01 |
| 15 | ಸ್ಥಾನಿಕ ವೈದ್ಯಾಧಿಕಾರಿಗಳ ಕೊಠಡಿ | 01 |
| 16 | ಮ್ಯಾಟ್ರನ್ ಕಚೇರಿ | 01 |
| 17 | ಎಸ್ಟೇಟ್ ಆಫಿಸರ್ ಕೊಠಡಿ | 01 |
| 18 | ಫಿಜಿಕಲ್ ಥೆರಪಿ | 07 |
| 19 | ಮೈನರ್ ಓಟಿ | 02 |
| 20 | ಇ.ಎನ್.ಟಿ ಮೈನರ್ ಓಟಿ | 02 |
| 21 | ಅಡಿಯೋಮೆಟ್ರಿ | 01 |
| 22 | ಕ್ಲಿನಿಕಲ್ ಬಯೋಕೆಮಿಸ್ಟ್ರೀ | 03 |
| 23 | ಪ್ಯಾಥಲಜಿ ಲ್ಯಾಬ್ | 05 |
| 24 | ಮೈಕ್ರೋಬಯಾಲಜಿ ಲ್ಯಾಬ್ | 03 |
| 25 | ಪಿಡಿಯಾಟ್ರೀಕ್ ಓಪಿಡಿ | 02 |
| 26 | ಡ್ಯೂಟಿ ಡಾಕ್ಟರ್ ಕೊಠಡಿ | 01 |
| 27 | ಲೇಬರ್ ರೂಂ | 01 |
| 28 | ಪ್ರಾಧ್ಯಾಪಕರು | 01 |
| 29 | ಎ.ಆರ್.ಟಿ ಲ್ಯಾಬ್ | 01 |
| 30 | ಆರ್.ಐ.ಸಿ.ಯು | 05 |
| 31 | ಸೆಂಟ್ರಲ್ ಲ್ಯಾಬ್ | 03 |
| 32 | ಬ್ಲಡ್ ಬ್ಯಾಂಕ್ ಸ್ಟೋರ್ | 02 |
| 33 | ಬ್ಲಡ್ ಬ್ಯಾಂಕ್ | 16 |



Director
RIMS, Raichur

| | | |
|---|---|---|
| 34 | ಎಂಡೋಸ್ಕೋಪ್ | 02 |
| 35 | ಇತರ ವಿಭಾಗಗಳು | 10 |
| 36 | ಲ್ಯಾಬೋರೇಟರಿ | 02 |
| 37 | ಚರ್ಮ ಮತ್ತು ಲೈಂಗಿಕ ತಜ್ಞ ವಿಭಾಗ ಮತ್ತು ನೇತ್ರಾ ಚಿಕಿತ್ಸಾ ವಿಭಾಗ | 16 |
| 38 | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ, ಮಾನಸಿಕ ತಜ್ಞ ವಿಭಾಗ ಮತ್ತು ಮಕ್ಕಳ ವಿಭಾಗ | 08 |
| 39 | ಮೆಟರ್‌ನಿಟಿ ವಾರ್ಡ್ | 04 |
| 40 | ಎ.ಎಸ್.ಸಿ ವಾರ್ಡ್ | 02 |
| 41 | ಪ್ರಯೋಗಾಲಯ | 02 |
| 42 | ಡ್ಯೂಟಿ ಡಾಕ್ಟರ್ | 01 |
| 43 | ಅರ್ಥೋ ವಾರ್ಡ್ | 13 |
| 44 | ಇ.ಎನ್.ಟಿ. ವಿಭಾಗ | 01 |
| 45 | ದಂತ ಚಿಕಿತ್ಸಾ ವಿಭಾಗ | 01 |
| 46 | ಪುರುಷ ಹಾಗೂ ಮಹಿಳಾ ಬರ್ನ್ ವಾರ್ಡ್ | 07 |
| 47 | ಎಸ್.ಎನ್.ಸಿ.ಯು | 23 |
| 48 | ಎಂ.ಐ.ಸಿ.ಯು | 06 |
| 49 | ಓಟಿ | 03 |
| 50 | ಇ.ಎನ್.ಟಿ ಓಟಿ | 02 |
| 51 | ನೇತ್ರ ಚಿಕಿತ್ಸಾ ವಿಭಾಗದ ಓಟಿ | 06 |
| 52 | ಓಟಿ ರಿಕವರಿ | 04 |
| 53 | ಎಮರ್ಜೆನ್ಸಿ ಓಟಿ | 02 |
| 54 | ಸರ್ಜರಿ ಓಟಿ | 02 |
| 55 | ಅರ್ಥೋ ಓಟಿ | 04 |
| 56 | ಸೆಪ್ಟಿಕ್ ಓಟಿ | 02 |
| 57 | ಓ.ಬಿ.ಜಿ ಓಟಿ | 04 |
| 58 | ಲ್ಯಾಪ್ರೋಸ್ಕೋಪಿ | 02 |
| 59 | ಪೇಶಿಯೋ ಮ್ಯಾಕ್ಸಿಲರಿ | 01 |
| 60 | ಡೆಂಟಲ್ ಓಟಿ | 05 |
| 61 | ಪಿ.ಎಂ ರೂಂ | 01 |
| 62 | ಗ್ರಂಥಾಲಯ | 06 |
| 63 | ಡಿಜಿಟಲ್ ಲೈಬ್ರರಿ | 04 |
| 64 | ಡೀನ್ ಕಚೇರಿ | 02 |
| 65 | ಕೌನ್ಸಿಲ್ ಹಾಲ್ | 02 |
| 66 | ನೆಲಮಹಡಿ ಡೀನ್ ಕಚೇರಿ | 02 |
| 67 | ಅನಿಮಲ್ ಹೌಸ್ | 01 |
| 68 | ಅಡಿಟೋರಿಯಮ್ | 20 |
| | ಒಟ್ಟು | 272 |

ಸದರಿ ಹವಾ ನಿಯಂತ್ರಕಗಳ ಕುರಿತು ವಿಚಾರಿಸಲಾಗಿ ಒಂದು ಹವಾನಿಯಂತ್ರಕವನ್ನು ಸಿ.ಎಂ.ಸಿ ನಿರ್ವಹಣೆ ಮಾಡಲು ಅಂದಾಜು ರೂ. 2,200/- ಗಳು ಆಗುವುದಾಗಿ ತಿಳಿಸಿರುತ್ತಾರೆ. ಒಟು 272 ಹವಾ ನಿಯಂತ್ರಕಗಳನ್ನು ಸಿ.ಎಂ.ಸಿ ನೀಡಿದಲ್ಲಿ ಒಟ್ಟು ರೂ. 5,98,400/- ಗಳು ಆಗುವ ಸಾಧ್ಯತೆಯಿರುತ್ತದೆ.



Director
RIMS, Raichur

ಸದರಿ ಕಾಮಗಾರಿಯು ಬಹುತೇಕ ರಿಮ್ಸ್ ಬೋಧಕ ಆಸ್ಪತ್ರೆಗೆ ಸಂಬಂಧಿಸಿರುವುದರಿಂದ, ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ. 62334775412 ದಲ್ಲಿ ರೂ. 4,00,00,000/- ಗಳ ಲಭ್ಯವಿದ್ದು, ಸದರಿ ಕಾಮಗಾರಿಯ ವೆಚ್ಚವನ್ನು ಬಳಕೆದಾರರ ಖಾತೆಯಿಂದ ಭರಿಸಬಹುದಾಗಿರುತ್ತದೆ.

ಕಾರಣ ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಅಳವಡಿಸಲಾಗಿರುವ ಒಟ್ಟು 272 ಹವಾನಿಯಂತ್ರಕಗಳಿಗೆ ಐದು ವರ್ಷಗಳಿಗೆ ಸಿ.ಎಂ.ಸಿ ನೀಡಲು ನಿಯಮಾನುಸಾರ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಅಲ್ಪಾವಧಿ ಟೆಂಡರ್ ಆಹ್ವಾನಿಸಲು ಹಾಗೂ ಪ್ರತಿ ವರ್ಷ ವೆಚ್ಚವಾಗುವ ರೂ. 5,98,400/- x 5 ವರ್ಷಗಳು = ರೂ. 29,92,000/- ಗಳನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ. 62334775412 ದಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಅಳವಡಿಸಲಾಗಿರುವ ಒಟ್ಟು 272 ಹವಾನಿಯಂತ್ರಕಗಳಿಗೆ ಸಿ.ಎಂ.ಸಿ ನಿರ್ವಹಣೆಯನ್ನು ನೀಡುವ ಸಂಬಂಧ ನಿಯಮಾನುಸಾರ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಒಂದು ವರ್ಷದ ಅವಧಿಗೆ ಟೆಂಡರ್ ಆಹ್ವಾನಿಸಿ ಕ್ರಮ ಕೈಗೊಳ್ಳಲು ಅನುಮೋದನೆ ನೀಡಲಾಯಿತು. ಹಾಗೂ ಸದರಿ ಟೆಂಡರ್‌ದಾರರ ಕಾರ್ಯವು ತೃಪ್ತಿಕರವಾಗಿದ್ದಲ್ಲಿ ಮಾತ್ರ ಮುಂದಿನ ಒಂದು ವರ್ಷದ ಅವಧಿಗೆ ಹವಾನಿಯಂತ್ರಕಗಳಿಗೆ ಸಿ.ಎಂ.ಸಿ ಅವಧಿಯನ್ನು ವಿಸ್ತರಿಸಲು ಇದಕ್ಕೆ ವೆಚ್ಚವಾಗುವ ಅನುದಾನವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆ ಸಂಖ್ಯೆ. 62334775412 ರಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸುವಂತೆ ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 15 : | ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿನ ನೆಲಮಹಡಿಯಿಂದ ಆರನೇ ಮಹಡಿಯವರೆಗೆ **Corridors** ಗಳಲ್ಲಿ ಪಾಲಿಕಾರ್ಬೋನೇಟ್ ಸೀಟುಗಳನ್ನು ಅಳವಡಿಸುವ ಬಗ್ಗೆ. |

ರಿಮ್ಸ್ ಬೋಧಕ ಆಸ್ಪತ್ರೆಯು ನೆಲಮಹಡಿಯಿಂದ ಆರನೇ ಮಹಡಿಯವರೆಗಿನ ಕಟ್ಟಡವನ್ನು ಹೊಂದಿದ್ದು, ಆಸ್ಪತ್ರೆಗೆ ಬರುವ ರೋಗಿಗಳು, ಅವರ ಸಂಬಂಧಿಕರು ಮತ್ತು ಸಾರ್ವಜನಿಕರು ಆಸ್ಪತ್ರೆಯಲ್ಲಿನ ಕಾರಿಡಾರ್‌ಗಳಲ್ಲಿ ನಿಂತು ಉಗುಳುವುದು, ಉಳಿದ ಆಹಾರ ಪದಾರ್ಥಗಳನ್ನು ಎಸೆಯುವುದು ಮಾಡುತ್ತಿರುತ್ತಾರೆ. ಉಳಿದ ಆಹಾರ ಪದಾರ್ಥಗಳನ್ನು ಹಾಕಲು ಡಸ್ಟ್‌ಬಿನ್‌ಗಳನ್ನು ವ್ಯವಸ್ಥೆ ಮಾಡಿದ್ದರೂ ಸಹ ಅದರಲ್ಲಿ ಹಾಕದೇ ನೆಲ ಮಹಡಿಗೆ ಎಸೆಯುತ್ತಿರುತ್ತಾರೆ. ಇದರಿಂದಾಗಿ ಆಸ್ಪತ್ರೆಯಲ್ಲಿನ ನೆಲಮಹಡಿಯಲ್ಲಿರುವ ವಿಭಾಗಗಳಿಗೆ, ವಾರ್ಡ್‌ಗಳಿಗೆ ಮತ್ತು ಆಡಳಿತ ಕಚೇರಿಯಲ್ಲಿ ವಿಪರೀತ ದುರ್ವಾಸನೆ ಉಂಟಾಗಿ ಕಾರ್ಯನಿರ್ವಹಿಸಲು ತುಂಬಾ ತೊಂದರೆ ಉಂಟಾಗಿರುತ್ತದೆ. ಎಷ್ಟೇ ನಿರ್ದೇಶನಗಳನ್ನು ನೀಡಿದರೂ ಸಹ ಇದನ್ನು ನಿಯಂತ್ರಿಸಲು ಸಾಧ್ಯವಾಗುತ್ತಿರುವುದಿಲ್ಲ. ಈ ಹಿನ್ನಲೆಯಲ್ಲಿ ಮೆ॥ ಕ್ಯಾಪುಟೆಕ್ ರಾಯಚೂರು ಇವರಿಗೆ ಆಸ್ಪತ್ರೆಯ ನೆಲಮಹಡಿಯಿಂದ ಆರನೇ ಮಹಡಿಯವರೆಗಿನ ರೋಗಿಗಳು, ಅವರ ಸಂಬಂಧಿಸಿಕರು ಮತ್ತು ಸಾರ್ವಜನಿಕರು ಉಗುಳದಂತೆ ಮತ್ತು ಉಳಿದ ಆಹಾರ ಪದಾರ್ಥಗಳನ್ನು ಎಸೆಯದಂತೆ ಆಸ್ಪತ್ರೆಯ ಕಾರಿಡಾರ್‌ಗಳಲ್ಲಿ ಪಾಲಿಕಾರ್ಬೋನೇಟ್ ಸೀಟುಗಳನ್ನು ಅಳವಡಿಸಲು ಸ್ಥಳವನ್ನು ಪರಿಶೀಲಿಸಿ ಅಂದಾಜು ಪಟ್ಟಿಯನ್ನು ನೀಡುವಂತೆ ಕೋರಲಾಗಿತ್ತು.

ಮೆ॥ ಕ್ಯಾಪುಟೆಕ್, ರಾಯಚೂರು ಇವರು ನೆಲಮಹಡಿಯಿಂದ ಆರನೇ ಮಹಡಿಯವರೆಗಿನ ಆಸ್ಪತ್ರೆಯ ಕಾರಿಡಾರ್‌ಗಳಲ್ಲಿ ಪಾಲಿಕಾರ್ಬೋನೇಟ್ ಸೀಟುಗಳನ್ನು ಅಳವಡಿಸಲು ರೂ. 24,72,000/- ಗಳ ಅಂದಾಜು ಪಟ್ಟಿಯನ್ನು ರಿಮ್ಸ್ ಕಾರ್ಯಾಲಯಕ್ಕೆ ದಿನಾಂಕ 02.06.2017 ರಂದು ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯು ರಿಮ್ಸ್ ಬೋಧಕ ಆಸ್ಪತ್ರೆಗೆ ಸಂಬಂಧಿಸಿರುವುದರಿಂದ, ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ. 62334775412 ದಲ್ಲಿ ರೂ. 4,00,00,000/- ಗಳ ಲಭ್ಯವಿದ್ದು, ಸದರಿ ಕಾಮಗಾರಿಯ ವೆಚ್ಚವನ್ನು ಬಳಕೆದಾರರ ಖಾತೆಯಿಂದ ಭರಿಸಬಹುದಾಗಿರುತ್ತದೆ.

Director
RIMS, Raichur

ಮೆ॥ ಕ್ಯಾಪುಟೆಕ್ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರಿ ಅಧಿಸೂಚನೆ ಸಂಖ್ಯೆ ವಇ / 156 / ಹೆಚ್‌ಎಂ / 2009 ದಿನಾಂಕ 29.12.2009 ರಂತೆ ಕಾಮಗಾರಿಗಳನ್ನು ಸದರಿಯವರ ಮುಖಾಂತರ ನೇರವಾಗಿ ಕೈಗೊಳ್ಳಲು ಪಾರದರ್ಶಕತೆ ಕಾಯ್ದೆಯಿಂದ (4ಜಿ) ವಿನಾಯಿತಿ ನೀಡಲಾಗಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿನ ನೆಲಮಹಡಿಯಿಂದ ಆರನೇ ಮಹಡಿಯವರೆಗಿನ ಕಾರಿಡಾರ್‌ಗಳಲ್ಲಿ ರೋಗಿಗಳು, ಅವರು ಸಂಬಂಧಿಕರು ಮತ್ತು ಸಾರ್ವಜನಿಕರು ಉಗುಳದಂತೆ ಮತ್ತು ಉಳಿದ ಆಹಾರ ಪದಾರ್ಥಗಳನ್ನು ಎಸೆಯದಂತೆ ಮೆ॥ ಕ್ಯಾಪುಟೆಕ್, ರಾಯಚೂರು ಇವರಿಂದ ಆಸ್ಪತ್ರೆಯ ಕಾರಿಡಾರ್‌ಗಳಲ್ಲಿ ಪಾಲಿಕಾರ್ಬೋನೇಟ್ ಸೀಟುಗಳನ್ನು ಅಳವಡಿಸಲು ಸಲ್ಲಿಸಿರುವ ರೂ. 24,72,000/– ಗಳ ಅಂದಾಜು ಪಟ್ಟಿಗೆ ಅನುಮೋದನೆಯನ್ನು ನೀಡಿ, ಸದರಿ ಕಾಮಗಾರಿಯನ್ನು ಮೆ॥ ಕ್ಯಾಪುಟೆಕ್, ರಾಯಚೂರು ಇವರ ಮುಖಾಂತರ ಕೈಗೊಳ್ಳುವ ಬಗ್ಗೆ ಹಾಗೂ ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ದಲ್ಲಿ ಉಳಿತಾಯವಾಗಿರುವ ರೂ. 4,00,00,000/– ಗಳ ಅನುದಾನದಿಂದ ಈ ವೆಚ್ಚವನ್ನು ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿನ ನೆಲಮಹಡಿಯಿಂದ ಆರನೇ ಮಹಡಿಯವರೆಗಿನ ಕಾರಿಡಾರ್‌ಗಳಲ್ಲಿ ರೋಗಿಗಳು, ಅವರು ಸಂಬಂಧಿಕರು ಮತ್ತು ಸಾರ್ವಜನಿಕರು ಉಗುಳದಂತೆ ಮತ್ತು ಉಳಿದ ಆಹಾರ ಪದಾರ್ಥಗಳನ್ನು ಎಸೆಯದಂತೆ ಮೆ॥ ಕ್ಯಾಪುಟೆಕ್, ರಾಯಚೂರು ಇವರ ಮುಖಾಂತರ ಆಸ್ಪತ್ರೆಯ ಕಾರಿಡಾರ್‌ಗಳಲ್ಲಿ ಪಾಲಿಕಾರ್ಬೋನೇಟ್ ಸೀಟುಗಳನ್ನು ಅಳವಡಿಸಲು ಸಲ್ಲಿಸಿರುವ ರೂ. 24,72,000/– ಗಳ ಅಂದಾಜು ಪಟ್ಟಿಯನ್ನು ಪರಿಶೀಲಿಸಿ, ಮೆ॥ ಕ್ಯಾಪುಟೆಕ್ ಇವರ ಮುಖಾಂತರ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ದಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸುವಂತೆ ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

ಸದರಿ ಪಾಲಿಕಾರ್ಬೋನೇಟ್ ಸೀಟುಗಳನ್ನು ಕಾರಿಡಾರ್‌ಗಳಲ್ಲಿ ಅಳವಡಿಸುವ ವೇಳೆಯಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ, ರೋಗಿಗಳಿಗೆ ಜಾಗೃತಿ ಮೂಡಿಸಲು ಉತ್ತಮವಾದ ಚಿತ್ರೀಕರಣದಿಂದ ಕೂಡಿರುವ ಆರೋಗ್ಯಕರ ಸಲಹೆ ಮತ್ತು ಸೂಚನೆಗಳನ್ನು ಪ್ರದರ್ಶಿಸುವಂತೆ ಹಾಗೂ ಆಸ್ಪತ್ರೆಯಲ್ಲಿ ದಿನನಿತ್ಯದ ಸ್ವಚ್ಛತೆಯನ್ನು ಕೈಗೊಳ್ಳುವ ಸಂಬಂಧ ಆಸ್ಪತ್ರೆಯ ಸೂಪರ್ ವೈಜರ್‌ಗಳು ಮತ್ತು ಭದ್ರತಾ ಸಿಬ್ಬಂದಿಗಳಿಗೆ ಸಲಹೆ ಮತ್ತು ಸೂಚನೆಗಳನ್ನು ನೀಡಲು ಸುತ್ತೋಲೆ ಹೊರಡಿಸುವಂತೆ ಆರ್ಥಿಕ ಸಮಿತಿ ಸಭೆಯು ಸೂಚಿಸಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – **16** : | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಜೀವರಸಾಯನ ಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ **Fully Automated Biochemistry Analyzer** ಉಪಕರಣವನ್ನು ಖರೀದಿಸಲು ಆಹ್ವಾನಿಸಲಾಗಿರುವ ಟೆಂಡರ್ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಜೀವರಸಾಯನ ಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ Fully Automated Biochemistry Analyzer ಉಪಕರಣವನ್ನು ಪೂರೈಸುವಂತೆ ವಿಭಾಗದ ಮುಖ್ಯಸ್ಥರು, ಜೀವರಸಾಯನ ಶಾಸ್ತ್ರ ವಿಭಾಗ, ರಿಮ್ಸ್, ರಾಯಚೂರು ಇವರು ಬೇಡಿಕೆ ಪತ್ರದಲ್ಲಿ ಕೋರಿದ ಹಿನ್ನಲೆಯಲ್ಲಿ ಸರ್ಕಾರದಿಂದ ಏಕಕಡತದಲ್ಲಿ ಅನುಮತಿ ಪಡೆದು ನಿಯಮಾನುಸಾರ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸದರಿ ಉಪಕರಣಗಳನ್ನು ಖರೀದಿಸಲು ಅಂದಾಜು ರೂ. 15.00 ಲಕ್ಷಗಳ ಅವಶ್ಯಕತೆಯಿದ್ದು, ಈ ವೆಚ್ಚವನ್ನು ಸರ್ಕಾರದಿಂದ ರಿಮ್ಸ್ ಸಂಸ್ಥೆಗೆ ಲೆಕ್ಕ ಶೀರ್ಷಿಕೆ ಲೆಕ್ಕ ಶೀರ್ಷಿಕೆ 2210–05–105–1–40–101 ಯೋಜನೆ ಹಾಗೂ ಯೋಜನೇತರ ಅಡಿಯಲ್ಲಿ ಬಿಡುಗಡೆಯಾಗಿ ಉಳಿತಾಯವಾಗಿರುವ ಅನುದಾನದಿಂದ ಈ ವೆಚ್ಚವನ್ನು ಭರಿಸಲಾಗುವುದು.

Director
RIMS, Raichur

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಜೀವರಸಾಯನ ಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ Fully Automated Biochemistry Analyzer ಉಪಕರಣವನ್ನು ಖರೀದಿಸಲು ಆಹ್ವಾನಿಸಲಾಗಿರುವ ಟೆಂಡರ್ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ನೀಡುವಂತೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

<u>Department of Biochemistry</u>

| Sl No | Name of the Equipment | Quantity required | Approximate Rate |
|---|---|---|---|
| 01 | Fully Automated Biochemistry Analyzer | 01 | 15.00 Lakhs |

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಜೀವರಸಾಯನ ಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ **Fully Automated Biochemistry Analyzer** ಉಪಕರಣವನ್ನು ನಿಯಮಾನುಸಾರ ಖರೀದಿಸಲು ಆಹ್ವಾನಿಸಲಾಗಿರುವ ಟೆಂಡರ್ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – **17** | 2017–18ನೇ ಸಾಲಿಗೆ ರಿಮ್ಸ್ ಬೋಧಕ ಆಸ್ಪತ್ರೆಗೆ ಪ್ರತಿನಿತ್ಯ ಅವಶ್ಯವಿರುವ ಆಕ್ಸಿಜನ್ ಮತ್ತು ನೈಟ್ರೋಸ್ ಆಕ್ಸೈಡ್ ಅನಿಲದ ಸಿಲೆಂಡರ್‌ಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಭರ್ತಿ ಮಾಡಿಸಲು ಅನುಮತಿ ನೀಡುವ ಕುರಿತು. |

ರಿಮ್ಸ್ ಬೋಧಕ ಆಸ್ಪತ್ರೆಯ ರೋಗಿಗಳಿಗೆ ಚಿಕಿತ್ಸೆಯ ನಿಮಿತ್ತ ಅವಶ್ಯವಿರುವ ಆಕ್ಸಿಜನ್ ಮತ್ತು ನೈಟ್ರೋಸ್ ಆಕ್ಸೈಡ್ ಅನಿಲದ ಖಾಲಿ ಸಿಲೆಂಡರ್‌ಗಳನ್ನು 2017–18 ನೇ ಸಾಲಿಗೆ ಭರ್ತಿ ಮಾಡಿಸುವಂತೆ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಅರವಳಿಕೆ ವಿಭಾಗ, ರಿಮ್ಸ್, ರಾಯಚೂರು ಇವರು ಈ ಕೆಳಕಂಡ ಬೇಡಿಕೆ ಪತ್ರಕ್ಕೆ ಅನುಗುಣವಾಗಿ ಭರ್ತಿ ಮಾಡಿಸಿಕೊಡುವಂತೆ ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಸಿಲೆಂಡರ್ | ಕ್ಯೂಬಿಕ್ | ಪ್ರತಿ ಸಿಲೆಂಡರ್ ರಿಫಿಲಿಂಗ್ ಮಾಡುವ ಮೊತ್ತ | ಒಂದು ವರ್ಷಕ್ಕೆ ಅವಶ್ಯವಿರುವ ಸಿಲೆಂಡರ್‌ಗಳ ಸಂಖ್ಯೆ | ಅವಶ್ಯವಿರುವ ಮೊತ್ತ |
|---|---|---|---|---|---|
| 1 | Medical Oxygen Jumbo Cylinder | 7 Cubic Mtr | 250/– | 18000 | 45,00,000/– |
| 2 | Medical Oxygen "B" Type cylinder | B type 1.5 Cubic mtr | 90/– | 400 | 36,000/– |
| 3 | Medcial Oxygen "A" cylinder | A type 1 cubic mtr | 70/– | 60 | 4,200/– |
| 4 | Medical nitrous oxide jumbo cylinder | 30kg | 5000/– | 50 | 2,50,000/– |
| 5 | Medcial nitrous oxide "A" cylinder | 3.5 kg | 400/– | 360 | 1,44,000/– |
| | ಅವಶ್ಯವಿರುವ ಒಟ್ಟು ಮೊತ್ತ | | | | 49,34,200/– |

Director
RIMS, Raichur

ಸದರಿ ಮೇಲ್ಕಂಡ ಸಿಲೆಂಡರ್‌ಗಳನ್ನು ಭರ್ತಿ ಮಾಡಿಸಲು ಅಂದಾಜು ರೂ. 49,34,200/- ಗಳ ಅವಶ್ಯಕತೆಯಿದ್ದು, ರಿಮ್ಸ್ ಸಂಸ್ಥೆಯ ಲೆಕ್ಕ ಶೀರ್ಷಿಕೆ 2210-05-105-1-54-103 ಅಡಿಯಲ್ಲಿ ಬಿಡುಗಡೆಯಾಗಿವ ಅನುದಾನದಿಂದ ಈ ವೆಚ್ಚವನ್ನು ಭರಿಸಬಹುದಾಗಿರುತ್ತದೆ. ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ದಲ್ಲಿ ರೂ. 4,00,00,000/- ಗಳ ಲಭ್ಯವಿದ್ದು, ಸದರಿ ಕಾಮಗಾರಿಯ ವೆಚ್ಚವನ್ನು ಬಳಕೆದಾರರ ಖಾತೆಯಿಂದ ಭರಿಸಬಹುದಾಗಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಗೆ ಬರುವ ರೋಗಿಗಳ ಹಿತದೃಷ್ಟಿಯಿಂದ ರಿಮ್ಸ್ ಬೋದಕ ಆಸ್ಪತ್ರೆಗೆ 2017-18ನೇ ಸಾಲಿಗೆ ಅವಶ್ಯವಿರುವ ಆಕ್ಸಿಜನ್ ಮತ್ತು ನೈಟ್ರೋಸ್ ಆಕ್ಸೈಡ್ ಅನಿಲದ ಖಾಲಿ ಸಿಲೆಂಡರ್‌ಗಳನ್ನು ನಿಯಮಾನುಸಾರ ಭರ್ತಿ ಮಾಡಿಸಲು ಟೆಂಡರ್ ಆಹ್ವಾನಿಸಲು ಮತ್ತು ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ದಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋದಕ ಆಸ್ಪತ್ರೆಗೆ 2017-18ನೇ ಸಾಲಿಗೆ ಅವಶ್ಯವಿರುವ ಆಕ್ಸಿಜನ್ ಮತ್ತು ನೈಟ್ರೋಸ್ ಆಕ್ಸೈಡ್ ಅನಿಲದ ಖಾಲಿ ಸಿಲೆಂಡರ್‌ಗಳನ್ನು ನಿಯಮಾನುಸಾರ ಭರ್ತಿ ಮಾಡಿಸಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಮತ್ತು ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ದಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ **- 18** | ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಹಾರಿಜಂಟಲ್ ಆಟೋ ಕ್ಲೇವ್ ಉಪಕರಣವನ್ನು ಮತ್ತು ಇ.ಟಿ.ಓ ಸ್ಟರಲೈಸರ್ ಉಪಕರಣವನ್ನು ಖರೀದಿಸಲು ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

ಭಾರತೀಯ ವೈದ್ಯಕೀಯ ಮಂಡಳಿಯು ರಿಮ್ಸ್ ಸಂಸ್ಥೆಗೆ ಭೇಟಿ ನೀಡಿದ ಸಮಯದಲ್ಲಿ ಇ.ಟಿ.ಓ ಸ್ಟರಲೈಸರ್ ಉಪಕರಣ ಮತ್ತು ಹಾರಿಜಂಟಲ್ ಆಟೋ ಕ್ಲೇವ್ ಉಪಕರಣಗಳು ಲಭ್ಯವಿಲ್ಲದಿರುವುದನ್ನು ಗುರುತಿಸಿ ಆಕ್ಷೇಪಣೆಯನ್ನು ಸರಿಪಡಿಸಿಕೊಳ್ಳುವಂತೆ ನಿರ್ದೇಶನ ನೀಡಿರುತ್ತಾರೆ. ರಿಮ್ಸ್ ಬೋಧಕ ಆಸ್ಪತ್ರೆಗೆ 10 ಬಿನ್ನಿನ ಹಾರಿಜೆಂಟಲ್ ಎರಡು ಉಪಕರಣ ಮತ್ತು ಐದು ಬಿನ್ನಿನ 02 ವರ್ಟಿಕಲ್ ಆಟೋ ಕ್ಲೇವ್ ಉಪಕರಣಗಳ ಅವಶ್ಯಕತೆಯಿರುತ್ತದೆ. ಈ ಹಿನ್ನಲೆಯಲ್ಲಿ ವೈದ್ಯಕೀಯ ಅಧಿಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರು ಪತ್ರ ಸಂಖ್ಯೆ ರಿಮ್ಸ್ / ಬೋಆರಾ / 2016-17 / 55 ಪತ್ರದನ್ವಯ ಸದರಿ ಉಪಕರಣಗಳನ್ನು ಖರೀದಿಸಿ ಪೂರೈಸುವಂತೆ ಕೋರಿರುತ್ತಾರೆ.

ಹಾರಿಜಂಟಲ್ ಆಟೋ ಕ್ಲೇವ್ ಉಪಕರಣಕ್ಕೆ ಅಂದಾಜು 35.00 ಲಕ್ಷ ಮತ್ತು ಇ.ಟಿ.ಓ ಸ್ಟರಲೈಜರ್ ಉಪಕರಣಕ್ಕೆ ಅಂದಾಜು ರೂ. 25.00 ಲಕ್ಷಗಳು ವೆಚ್ಚವಾಗುವ ಸಾಧ್ಯತೆಯಿರುತ್ತದೆ. ಸದರಿ ಉಪಕರಣಗಳನ್ನು ಖರೀದಿಸಲು ರಿಮ್ಸ್ ಸಂಸ್ಥೆಯಲ್ಲಿ ಲೆಕ್ಕ ಶೀರ್ಷಿಕೆ 2210-05-105-1-54-101 ಅಡಿಯಲ್ಲಿ 2015-16 ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಅನುದಾನವು ಲಭ್ಯವಿರುತ್ತದೆ.

ಕಾರಣ ಭಾರತೀಯ ವೈದ್ಯಕೀಯ ಮಂಡಳಿಯು ಗುರುತಿಸಿರುವ ಆಕ್ಷೇಪಣೆಯನ್ನು ಸರಿಪಡಿಸಲು ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಹಾರಿಜಂಟಲ್ ಆಟೋ ಕ್ಲೇವ್ ಉಪಕರಣವನ್ನು ಮತ್ತು ಇ.ಟಿ.ಓ ಸ್ಟರಲೈಸರ್ ಉಪಕರಣವನ್ನು ಖರೀದಿಸಿ ಅಳವಡಿಸಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಮತ್ತು ಸದರಿ ಉಪಕರಣಗಳಿಗೆ ಸಲ್ಲುವ ಅಂದಾಜು ವೆಚ್ಚ ರೂ. 60.00 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2210-05-105-1-40/54-101

Director
RIMS, Raichur

ಅಡಿಯಲ್ಲಿ ಬಿಡುಗಡೆಯಾಗಿ ಉಳಿತಾಯವಾಗಿರುವ ರೂ. 8,24,37,540/- ಗಳ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಭಾರತೀಯ ವೈದ್ಯಕೀಯ ಮಂಡಳಿಯು ಗುರುತಿಸಿರುವ ಆಕ್ಷೇಪಣೆಯನ್ನು ಸರಿಪಡಿಸಲು ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಹಾರಿಜಂಟಲ್ ಆಟೋ ಕ್ಲೇವ್ ಉಪಕರಣವನ್ನು ಮತ್ತು ಇ.ಟಿ.ಓ ಸ್ಟರಲೈಸರ್ ಉಪಕರಣವನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಖರೀದಿಸಲು ಮತ್ತು ಸದರಿ ಉಪಕರಣಗಳ ಖರೀದಿಗೆ ಸಲ್ಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-40/54-101 ರ ಬದಲಾಗಿ ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 19 : | ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿನ ವಾಹನಗಳ ಸುರಕ್ಷತೆ ಹಾಗೂ ಭದ್ರತೆಯ ನಿಮಿತ್ತ ಪಾರ್ಕಿಂಗ್ ನಿರ್ವಹಣೆಗಾಗಿ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಬಗ್ಗೆ. |

ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರು ಪತ್ರ ಸಂಖ್ಯೆ ರಿಮ್ಸ್ / ಆಡಳಿತ / 2016-17 ದಿನಾಂಕ 12.12.2016 ರಲ್ಲಿ ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿನ ವಾಹನಗಳ ನಿಲುಗಡೆಯಲ್ಲಿನ ಸಿಬ್ಬಂದಿಗಳ, ಸಾರ್ವಜನಿಕರ ವಾಹನಗಳ ಸುರಕ್ಷತೆ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಪಾರ್ಕಿಂಗ್ ನಿರ್ವಹಣೆಗಾಗಿ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಕಾರಣ ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರು ಸಲ್ಲಿಸಿರುವ ಮನವಿಯನ್ನು ಆರ್ಥಿಕ ಸಮಿತಿ ಸಭೆಯ ಮುಂದೆ ಮಂಡಿಸಿ, ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿನ ವಾಹನಗಳ ನಿಲುಗಡೆಯಲ್ಲಿನ ಸಿಬ್ಬಂದಿಗಳ, ಸಾರ್ವಜನಿಕರ ವಾಹನಗಳ ಸುರಕ್ಷತೆ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಪಾರ್ಕಿಂಗ್ ನಿರ್ವಹಣೆಗಾಗಿ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿನ ವಾಹನಗಳ ನಿಲುಗಡೆಯ ಸಂಬಂಧ, ಸಿಬ್ಬಂದಿಗಳ, ಸಾರ್ವಜನಿಕರ ವಾಹನಗಳ ಸುರಕ್ಷತೆ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಪಾರ್ಕಿಂಗ್ ನಿರ್ವಹಣೆಗಾಗಿ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಕ್ರಮ ಕೈಗೊಳ್ಳಲು ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 20 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ರೇಡಿಯಾಲಜಿ ವಿಭಾಗದಲ್ಲಿನ ಎಕ್ಸ್-ರೇ (500ಎಂ.ಎ) ಉಪಕರಣವನ್ನು ದುರಸ್ಥಿ ಮಾಡಿಸಲು ಹಾಗೂ 60ಎಂಎ ಮತ್ತು 100ಎಂಎ ಮೊಬೈಲ್ ಎಕ್ಸ್‌ರೇ ಉಪಕರಣಗಳನ್ನು ನಿಯಮಾನುಸಾರ ಖರೀದಿಸಲು ಅನುಮತಿ ನೀಡುವ ಕುರಿತು. |

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿರುವ 500 ಎಂ.ಎ ಉಪಕರಣವನ್ನು ಈ ಹಿಂದೆ ಅಪೋಲೋ ಸಮೂಹದವರು ನಿರ್ವಹಿಸುತ್ತಿದ್ದ ಸಮಯದಲ್ಲಿ ವಿಪ್ರೋ ಕಂಪನಿಯಿಂದ ಉಪಕರಣವನ್ನು ಖರೀದಿಸಲಾಗಿತ್ತು. ಸದರಿ ಉಪಕರಣವು ಕಳೆದ ಮೂರು ವರ್ಷಗಳಿಂದ ದುರಸ್ಥಿಗೆ ಬಂದಿರುತ್ತದೆ. ಪ್ರಸ್ತುತ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಜನರಲ್ ಮೆಡಿಸಿನ್ ಮತ್ತು ಅಲೈಡ್ ವಿಭಾಗಗಳನ್ನು ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸ್ಥಳಾಂತರಿಸಲು ನಿರ್ಧರಿಸಲಾಗಿದ್ದು, ಸದರಿ ವಿಭಾಗಗಳನ್ನು ಓಪೆಕ್ ಆಸ್ಪತ್ರೆಗೆ ಸ್ಥಳಾಂತರಿಸಿದಲ್ಲಿ ರೋಗಿಗಳ ಎಕ್ಸರೇಯನ್ನು ಮಾಡಲು ಈ ಉಪಕರಣವು ಅತಿ ಅವಶ್ಯಕವಾಗಿರುತ್ತದೆ. ಉಪಕರಣದ ದುರಸ್ಥಿಯ ಸಂಬಂಧ ವಿಪ್ರೋ ಕಂಪನಿಯವರಿಗೆ ಸದರಿ



Director
RIMS, Raichur

ಉಪಕರಣದ ದುರಸ್ಥಿಯ ಕುರಿತು ಹಲವಾರು ಬಾರಿ ಮನವಿ ಮಾಡಿದರೂ ಸಹ ಉಪಕರಣದ ವಾರೆಂಟಿ ಅವಧಿಯು ಮುಕ್ತಾಯಗೊಂಡಿರುವುದರಿಂದ ಸದರಿಯವರು ಉಪಕರಣದ ದುರಸ್ಥಿಗೆ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಈ ಹಿನ್ನಲೆಯಲ್ಲಿ 3ನೇ ಪಾರ್ಟಿಯವರಿಂದ ಸದರಿ ಉಪಕರಣದ ದುರಸ್ಥಿಯ ಬಗ್ಗೆ ವಿಚಾರಿಸಲಾಗಿ ಸದರಿಯವರು ಓಪೆಕ್ ಆಸ್ಪತ್ರೆಗೆ ಭೇಟಿ ನೀಡಿ, ಉಪಕರಣವನ್ನು ಪರಿಶೀಲಿಸಿ ಸದರಿ ಉಪಕರಣದ ದುರಸ್ಥಿಗೆ ಅಂದಾಜು ರೂ. 1,50,000/- ಗಳು ಆಗುವುದಾಗಿ ತಿಳಿಸಿರುತ್ತಾರೆ.

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದಿನದಿಂದ ದಿನಕ್ಕೆ ರೇಡಿಯಾಲಜಿ ವಿಭಾಗದಲ್ಲಿ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ 60ಎಂಎ ಮತ್ತು 100ಎಂಎ ಮೊಬೈಲ್ ಎಕ್ಸ್‌ರೇ ಉಪಕರಣಗಳನ್ನು ಖರೀದಿಸುವುದು ಅತಿ ಅವಶ್ಯಕವಾಗಿರುತ್ತದೆ.

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಲೆಕ್ಕ ಶೀರ್ಷಿಕೆ 2210-01-110-2-37-101 ಅಡಿಯಲ್ಲಿ ಕಾಲಕಾಲಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಈ ಲೆಕ್ಕ ಶಿರ್ಷಿಕೆಯಲ್ಲಿ ಸದರಿ ಉಪಕರಣದ ದುರಸ್ಥಿಗೆ ಬೇಕಾದ ಅನುದಾನವು ಲಭ್ಯವಿರುತ್ತದೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ರೇಡಿಯಾಲಜಿ ವಿಭಾಗದಲ್ಲಿನ ಎಕ್ಸ್-ರೇ (500ಎಂ.ಎ) ಉಪಕರಣವನ್ನು ದುರಸ್ಥಿ ಮಾಡಿಸಲು ಅನುಮತಿ ಹಾಗೂ 60ಎಂಎ ಮತ್ತು 100ಎಂಎ ಮೊಬೈಲ್ ಎಕ್ಸ್‌ರೇ ಉಪಕರಣಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಅನುಮತಿ ನೀಡುವಂತೆ ಹಾಗೂ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-01-110-2-37-101 ಅಡಿಯಲ್ಲಿ ಅನುಮತಿ ನೀಡುವಂತೆ ಕೋರಿ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ರೇಡಿಯಾಲಜಿ ವಿಭಾಗಕ್ಕೆ ಅವಶ್ಯವಿರುವ 500ಎಂ.ಎ ಎಕ್ಸ್-ರೇ ಉಪಕರಣವನ್ನು ದುರಸ್ಥಿ ಮಾಡಿಸಲು ಹಾಗೂ 60ಎಂಎ ಮತ್ತು 100ಎಂಎ ಮೊಬೈಲ್ ಎಕ್ಸ್‌ರೇ ಉಪಕರಣಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಮತ್ತು ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-01-110-2-37-101 ಅಡಿಯಲ್ಲಿ ಭರಿಸುವಂತೆ ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 21 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಲ್ಯಾಬ್‌ರೇಟರಿ ವಿಭಾಗಗಕ್ಕೆ ಅವಶ್ಯವಿರುವ **Fully Automated Biochemistry Analyzer** ಉಪಕರಣವನ್ನು ನಿಯಮಾನುಸಾರ ಖರೀದಿಸಲು ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ಮೆಡಿಸಿನ್ ಮತ್ತು ಅಲೈಡ್ ವಿಭಾಗಗಳನ್ನು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸ್ಥಳಾಂತರಿಸಲು ನಿರ್ಧರಿಸಿರುವುದರಿಂದ ಓಪೆಕ್ ಆಸ್ಪತ್ರೆಗೆ ಪ್ರತ್ಯೇಕವಾಗಿ ಆಟೋಮೇಟೆಡ್ ಅನಲೈಜರ್ ಉಪಕರಣದ ಅವಶ್ಯಕತೆಯಿರುತ್ತದೆ. ಸದರಿ ಉಪಕರಣವನ್ನು ಖರೀದಿಸಿ ಅಳವಡಿಸಿದಲ್ಲಿ ಆಸ್ಪತ್ರೆಗೆ ದಾಖಲಾಗುವ ರೋಗಿಗಳ ಪ್ರಯೋಗಾಲಯಗಳಿಗೆ ಸಂಬಂಧಿಸಿದ ವರದಿಯನ್ನು ವೇಗವಾಗಿ ನೀಡಬಹುದಲ್ಲದೇ ರೋಗಿಗಳ ಸಾಂದ್ರತೆಯನ್ನು ನಿಯಂತ್ರಿಸಬಹುದಾಗಿರುತ್ತದೆ. ಸದರಿ ಉಪಕರಣದ ಬೆಲೆ ಅಂದಾಜು 15.00 ಲಕ್ಷಗಳ ಆಗುವ ಸಾಧ್ಯತೆಯಿರುತ್ತದೆ.

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಲೆಕ್ಕ ಶೀರ್ಷಿಕೆ 2210-01-110-2-37-101 ಅಡಿಯಲ್ಲಿ ಕಾಲಕಾಲಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಈ ಲೆಕ್ಕ ಶಿರ್ಷಿಕೆಯಲ್ಲಿ ಸದರಿ ಉಪಕರಣದ ಖರೀದಿಗೆ ಬೇಕಾದ ಅಂದಾಜು ರೂ. 15.00 ಲಕ್ಷಗಳ ಅನುದಾನವು ಲಭ್ಯವಿರುತ್ತದೆ.

Director
RIMS, Raichur

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಲ್ಯಾಬ್‌ರೇಟರಿ ವಿಭಾಗಗಕ್ಕೆ ಅವಶ್ಯವಿರುವ ಬಯೋಕೆಮಿಸ್ಟ್ರಿ ಅಟೋಮೇಟೆಡ್ ಅನಲೈಜರ್ ಉಪಕರಣವನ್ನು ನಿಯಮಾನುಸಾರ ಖರೀದಿಸಲು ಟೆಂಡರ್ ಆಹ್ವಾನಿಸಲು ಹಾಗೂ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-01-110-2-37-101 ಅಡಿಯಲ್ಲಿ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಲ್ಯಾಬ್‌ರೇಟರಿ ವಿಭಾಗಗಕ್ಕೆ ಅವಶ್ಯವಿರುವ **Fully Automated Biochemistry Analyzer** ಉಪಕರಣವನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಖರೀದಿಸಲು ಹಾಗೂ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-01-110-2-37-101 ಅಡಿಯಲ್ಲಿ ಭರಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 22 : | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರು ಪಾವತಿಸುವ ಕುರಿತು. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪಾವತಿಸುವಂತೆ ಕೋರಿ ವಿವಿಧ ದಿನಾಂಕಗಳಂದು ಈ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಿಬ್ಬಂದಿಗಳು ಕರ್ನಾಟಕ ಸರ್ಕಾರವು ನಿಗದಿಡಿಸಿರುವ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆಯನ್ನು ಪಡೆದಿದ್ದು, ಚಿಕಿತ್ಸೆಗೆ ಸಂಬಂಧಿಸಿದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಸಂಬಂಧ ಪಟ್ಟ ಆಸ್ಪತ್ರೆಯ ಮುಖ್ಯಸ್ಥರುಗಳಿಂದ ಧೃಡಿಕರಿಸಿ, ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರುಪಾವತಿಸುವಂತೆ ಕೋರಿರುತ್ತಾರೆ.

<u>ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಸರ್ಕಾರದಿಂದ ಅನುಮೋದಿತಗೊಂಡಿರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತಾರೆ.</u>

| ಕ್ರ.ಸಂ | ಸಿಬ್ಬಂದಿಯ ಹೆಸರು | ಪದನಾಮ | ಕಾರ್ಯ ನಿರ್ವಹಿಸುತ್ತಿರುವ ವಿಭಾಗ | ಮರು ಪಾವತಿಸುವಂತೆ ಕೋರಿರುವ ಒಟ್ಟು ಬಿಲ್ಲಿನ ಮೊತ್ತ | Amount approved as per CGHS Rates |
|---|---|---|---|---|---|
| 1 | ಡಾ. ಗಿರೀಶ್ ವಿ. ಅಚಲ್‌ಕರ್ | ಸಹ ಪ್ರಾಧ್ಯಾಪಕರು | ರೋಗನಿರ್ಧಾರಕ ಶಾಸ್ತ್ರ ವಿಭಾಗ | 283940.00 | 123726.00 |
| 2 | ಡಾ. ವೆಂಕಟೇಶ್ ನಾಯಕ್ | ಸಹ ಪ್ರಾಧ್ಯಾಪಕರು | ಮಿಣೀ ಶಾಸ್ತ್ರ ವಿಭಾಗ | 8000.00 | 4860.00 |
| 3 | ಡಾ. ಅರುಣ್ ಮಸ್ಕಿ | ಸಹಾಯಕ ಪ್ರಾಧ್ಯಾಪಕರು | ವೈದ್ಯಶಾಸ್ತ್ರ ವಿಭಾಗ | | |
| 4 | ಡಾ. ಶೋಭಾ ಸಿದ್ದೇಶ್ | ಹಿರಿಯ ಸ್ಥಾನಿಕರು | ಮಕ್ಕಳ ಶಾಸ್ತ್ರ ವಿಭಾಗ | 90000.00 | 64000.00 |
| 5 | ಡಾ. ಮಲ್ಲಿಕಾರ್ಜುನ್ | ಹಿರಿಯ ಸ್ಥಾನಿಕರು | ಅರವಳಿಕೆ ವಿಭಾಗ | 94002.00 | 30160.00 |
| 6 | ಶ್ರೀ ಸಂಗಮೇಶ್ ಸಜ್ಜನರ್ | ಶುಶ್ರೂಷಕರು | ರಿಮ್ಸ್ ಬೋಧಕ ಆಸ್ಪತ್ರೆ | 37800.00 | 23099.00 |
| 7 | ಶ್ರೀ ಪುಟ್ಟರಾಜ್ ಅಂಗಡಿ | ಪ್ರಯೋಗಶಾಲ ತಂತ್ರಜ್ಞರು | ರಿಮ್ಸ್ ಬೋಧಕ ಆಸ್ಪತ್ರೆ | 117600.00 | 68742.00 |
| | | | ಒಟ್ಟು ಮೊತ್ತ | 631342.00 | 314587.00 |

ಕಾರಣ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಮೇಲ್ಕಂಡ ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು CGHS ದರದನ್ವಯ ಮರು ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಕರ್ನಾಟಕ ಸರ್ಕಾರದ ನಿಯಮಾವಳಿಯಂತೆ ಮರುಪಾವತಿಸುವ ಸಂಬಂಧ ಪ್ರಸ್ತಾವನೆಗಳನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಪರಿಶೀಲನೆಗಾಗಿ ಸಲ್ಲಿಸಲು ಆರ್ಥಿಕ ಸಮಿತಿಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಿತು.

Director
RIMS, Raichur

| | |
|---|---|
| ವಿಷಯ ಸೂಚಿ ಸಂಖ್ಯೆ – 23 | ಡಾ. ಮೂಲಿಮನಿ ಬಾಪುಗೌಡ, ಬೋಧಕರು, ದಂತಚಿಕಿತ್ಸಾ ವಿಭಾಗ ಹಾಗೂ ಡಾ. ಕರಿಷ್ಮಾ ಮುನೋಳಿ, ಹಿರಿಯ ಸ್ಥಾನಿಕರು, ನೇತ್ರಾ ಚಿಕಿತ್ಸಾ ವಿಭಾಗ ಮತ್ತು ಡಾ. ರಮೇಶ್ ಸಾಗರ್, ಸಹಾಯಕ ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ, ರಿಮ್ಸ್, ರಾಯಚೂರು ಇವರುಗಳು ಪ್ರವೇಶಾತಿ ಸಮಯದಲ್ಲಿ ಪಾವತಿಸಿರುವ ವ್ಯಾಸಂಗದ ಶುಲ್ಕಗಳನ್ನು ಮತ್ತು ವೇತನ ಸಹಿತ ವ್ಯಾಸಂಗ ರಜೆಯನ್ನು ಮಂಜೂರು ಮಾಡಲು ಅನುಮತಿ ನೀಡುವ ಬಗ್ಗೆ |

1) ಡಾ. ಮೂಲಿಮನಿ ಬಾಪುಗೌಡ :-

ಡಾ. ಮೂಲಿಮನಿ ಬಾಪುಗೌಡ, ಬೋಧಕರು, ದಂತಚಿಕಿತ್ಸಾ ವಿಭಾಗ ಇವರು ದಿನಾಂಕ : 01.04.2011 ರಿಂದ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಖಾಯಂ ಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆ. 2017ನೇ ಸಾಲಿನಲ್ಲಿ ಜರುಗಿದ ಕೆ.ಇ.ಎ – 2017ರ ಪರೀಕ್ಷೆಯಲ್ಲಿ ಡಾ. ಮೂಲಿಮನಿ ಬಾಪುಗೌಡ, ಬೋಧಕರು, ದಂತಚಿಕಿತ್ಸಾ ವಿಭಾಗ ಇವರು ಉತ್ತೀರ್ಣರಾಗಿದ್ದು, ಸದರಿ ವೈದ್ಯರಿಗೆ ಸರ್ಕಾರಿ ದಂತ ಕಾಲೇಜು, ಬೆಂಗಳೂರಿನಲ್ಲಿ ಎಂ.ಡಿ.ಎಸ್ ಓರಲ್ ಸರ್ಜರಿ ವಿಷಯಕ್ಕೆ ಪ್ರವೇಶ ದೊರೆತಿರುತ್ತದೆಯಂದು ತಿಳಿಸಿ, ಸೇವಾ ನಿರತ ಕೋಟಾದಡಿಯಲ್ಲಿ ಆಯ್ಕೆಯಾಗಿರುವುದರಿಂದ ತಮಗೆ ಪ್ರವೇಶಾತಿ ಸಮಯದಲ್ಲಿ ಸಂದಾಯ ಮಾಡಿರುವ ಪ್ರವೇಶಾತಿ ಶುಲ್ಕವನ್ನು ರೂ. 37,080/– (ರೂ. 20,000/– ಟ್ಯೂಷನ್ ಶುಲ್ಕ + ಯುನಿರ್ವಸಿಟಿ ಶುಲ್ಕು 16,080/– + ಕೆ.ಇ.ಎ ಶುಲ್ಕ ರೂ. 1,010/–) ಹಾಗೂ ವೇತನ ಸಹಿತ ವ್ಯಾಸಂಗ ರಜೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ವ್ಯಾಸಂಗ ರಜೆ ಮುಕ್ತಾಯಗೊಂಡ ನಂತರ ಇದೇ ಸಂಸ್ಥೆಯಲ್ಲಿ ಸುಮಾರು 10 ವರ್ಷಗಳ ಕಾಲ ಸೇವೆ ಸಲ್ಲಿಸುವುದಾಗಿ ರೂ. 100/– ಗಳ ಬಾಂಡ್ ಪೇಪರ್ ಮೇಲೆ ಮುಚ್ಚಳಿಕೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ.

2) ಡಾ. ಕರಿಷ್ಮಾ ಮುನೋಳಿ :-

ಡಾ. ಕರಿಷ್ಮಾ ಮುನೋಳಿ, ಹಿರಿಯ ಸ್ಥಾನಿಕರು, ನೇತ್ರಾ ಚಿಕಿತ್ಸಾ ವಿಭಾಗ, ರಿಮ್ಸ್, ರಾಯಚೂರು ಇವರು ದಿನಾಂಕ : 19.10.2010 ರಿಂದ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಖಾಯಂ ಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆ. 2017ನೇ ಸಾಲಿನಲ್ಲಿ ಜರುಗಿದ ಕೆ.ಇ.ಎ – 2017ರ ಪರೀಕ್ಷೆಯಲ್ಲಿ ಡಾ. ಕರಿಷ್ಮಾ ಮುನೋಳಿ, ಹಿರಿಯ ಸ್ಥಾನಿಕರು, ನೇತ್ರಾ ಚಿಕಿತ್ಸಾ ವಿಭಾಗ, ರಿಮ್ಸ್, ರಾಯಚೂರು ಇವರು ಉತ್ತೀರ್ಣರಾಗಿದ್ದು, ಸದರಿ ವೈದ್ಯರಿಗೆ ಎಂ.ಆರ್.ಎಂ.ಸಿ, ಗುಲ್ಬರ್ಗಾದಲ್ಲಿ ಎಂ.ಎಸ್ (Opthalmology) ವಿಷಯಕ್ಕೆ ಪ್ರವೇಶ ದೊರೆತಿರುತ್ತದೆಯಂದು ತಿಳಿಸಿ, ಸೇವಾ ನಿರತ ಕೋಟಾದಡಿಯಲ್ಲಿ ಆಯ್ಕೆಯಾಗಿರುವುದರಿಂದ ತಮಗೆ ಪ್ರವೇಶಾತಿ ಸಮಯದಲ್ಲಿ ಸಂದಾಯ ಮಾಡಿರುವ ಪ್ರವೇಶಾತಿ ಶುಲ್ಕವನ್ನು ರೂ. 4,40,000/– ಗಳನ್ನು ಪಾವತಿಸುವಂತೆ ವೇತನ ಸಹಿತ ವ್ಯಾಸಂಗ ರಜೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ವ್ಯಾಸಂಗ ರಜೆ ಮುಕ್ತಾಯಗೊಂಡ ನಂತರ ಇದೇ ಸಂಸ್ಥೆಯಲ್ಲಿ ಸುಮಾರು 10 ವರ್ಷಗಳ ಕಾಲ ಸೇವೆ ಸಲ್ಲಿಸುವುದಾಗಿ ರೂ. 100/– ಗಳ ಬಾಂಡ್ ಪೇಪರ್ ಮೇಲೆ ಮುಚ್ಚಳಿಕೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ.

3) ಡಾ. ರಮೇಶ್ ಸಾಗರ್ :-

ಡಾ. ರಮೇಶ್ ಇವರು ದಿನಾಂಕ 13.08.2011 ರಂದು ಶಸ್ತ್ರ ಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಕರ್ತವ್ಯ ವರದಿ ಮಾಡಿಕೊಂಡಿದ್ದು, ಖಾಯಂ ಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆ. ಡಾ. ರಮೇಶ್ ಇವರು ದಿನಾಂಕ 05.08.2016 ರ ಮನವಿ ಪತ್ರದಲ್ಲಿ Rajiv Gandhi University of Health Sciences, Bangalore ವತಿಯಿಂದ Super Speciality Enterence Test – 2016 ಪರೀಕ್ಷೆಯಲ್ಲಿ M.ch – Surgical Oncology to Kidwai Memorial Institute of Oncology, Bangalore ಇಲ್ಲಿಗೆ ಮೆರಿಟ್‌ನಲ್ಲಿ ಆಯ್ಕೆಯಾಗಿದ್ದು, ಎರಡು ವರ್ಷಗಳ ಕಾಲ Surgical Oncology ವ್ಯಾಸಂಗ ಮಾಡಲು ಸೇವಾ ನಿರತ ಕೋಟಾದಡಿ Kidwai Memorial Institute of Oncology, Bangalore ನಿಯೋಜಿಸುವಂತೆ ಕೋರಿದ್ದರು. ಸದರಿಯವರನ್ನು 25 ನೇ ಆಡಳಿತ ಮಂಡಳಿಯ ಅನುಮೋದನೆ ಮೇರೆಗೆ ವ್ಯಾಸಂಗ ರಜೆಯನ್ನು ಮಂಜೂರು ಮಾಡಲಾಗಿದೆ.



Director
RIMS, Raichur

ಪ್ರಸ್ತುತ ಸದರಿಯವರು ದಿನಾಂಕ 05.08.2017 ರ ಪತ್ರದಲ್ಲಿ ಪ್ರವೇಶಾತಿ ಸಮಯದಲ್ಲಿ ಸಂದಾಯ ಮಾಡಿರುವ ಪ್ರವೇಶಾತಿ ಶುಲ್ಕವನ್ನು ರೂ. 2,27,100/- ಗಳನ್ನು ಪಾವತಿಸುವಂತೆ ಕೋರಿರುತ್ತಾರೆ. ಸದರಿ ವೈದ್ಯರಿಗೆ ಈಗಾಗಲೇ ಆಡಳಿತ ಮಂಡಳಿಯ ಅನುಮೋದನೆ ಮೇರೆಗೆ ವೇತನ ಸಹಿತ ವ್ಯಾಸಂಗ ರಜೆಯನ್ನು ಮಂಜೂರು ಮಾಡಲಾಗಿರುತ್ತದೆ. ಹಾಗೂ ವ್ಯಾಸಂಗ ರಜೆ ಮುಕ್ತಾಯಗೊಂಡ ನಂತರ ಇದೇ ಸಂಸ್ಥೆಯಲ್ಲಿ ಸುಮಾರು 10 ವರ್ಷಗಳ ಕಾಲ ಸೇವೆ ಸಲ್ಲಿಸುವುದಾಗಿ ರೂ. 100/- ಗಳ ಬಾಂಡ್ ಪೇಪರ್ ಮೇಲೆ ಮುಚ್ಚಳಿಕೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ.

ಕಾರಣ ಡಾ. ಮೂಲಿಮನಿ ಬಾಪುಗೌಡ, ಬೋಧಕರು, ದಂತಚಿಕಿತ್ಸಾ ವಿಭಾಗ, ಡಾ. ಕರಿಷ್ಮಾ ಮುನೋಳಿ, ಹಿರಿಯ ಸ್ಥಾನಿಕರು, ನೇತ್ರಾ ಚಿಕಿತ್ಸಾ ವಿಭಾಗ ಹಾಗೂ ಡಾ. ರಮೇಶ್ ಸಾಗರ್, ಸಹಾಯಕ ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ, ರಿಮ್ಸ್, ರಾಯಚೂರು ಇವರುಗಳು ಸೇವಾ ನಿರತ ಕೋಟಾದಡಿಯಲ್ಲಿ ಆಯ್ಕೆಯಾಗಿರುವುದರಿಂದ ಪ್ರವೇಶಾತಿ ಸಮಯದಲ್ಲಿ ಪಾವತಿಸಿರುವ ವ್ಯಾಸಂಗದ ಶುಲ್ಕಗಳನ್ನು ಲೆಕ್ಕ ಶೀರ್ಷಿಕೆ 2210-05-105-1-40/54-101 ಅಡಿಯಲ್ಲಿ ಪಾವತಿಸಲು ಅನುಮತಿ ಹಾಗೂ ಡಾ. ಮೂಲಿಮನಿ ಬಾಪುಗೌಡ ಮತ್ತು ಡಾ. ಕರಿಷ್ಮಾ ಮುನೋಳಿ ಇವರಿಗೆ ವೇತನ ಸಹಿತ ವ್ಯಾಸಂಗ ರಜೆಯನ್ನು ಮಂಜೂರು ಮಾಡಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಡಾ. ಮೂಲಿಮನಿ ಬಾಪುಗೌಡ, ಬೋಧಕರು, ದಂತಚಿಕಿತ್ಸಾ ವಿಭಾಗ, ಡಾ. ಕರಿಷ್ಮಾ ಮುನೋಳಿ, ಹಿರಿಯ ಸ್ಥಾನಿಕರು, ನೇತ್ರಾ ಚಿಕಿತ್ಸಾ ವಿಭಾಗ ಹಾಗೂ ಡಾ. ರಮೇಶ್ ಸಾಗರ್, ಸಹಾಯಕ ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ, ರಿಮ್ಸ್, ರಾಯಚೂರು ಇವರುಗಳು ಸೇವಾ ನಿರತ ಕೋಟಾದಡಿಯಲ್ಲಿ ಆಯ್ಕೆಯಾಗಿರುವುದರಿಂದ ಪ್ರವೇಶಾತಿ ಸಮಯದಲ್ಲಿ ಪಾವತಿಸಿರುವ ವ್ಯಾಸಂಗದ ಶುಲ್ಕಗಳನ್ನು ಲೆಕ್ಕ ಶೀರ್ಷಿಕೆ 2210-05-105-1-40/54-101 ಅಡಿಯಲ್ಲಿ ಮರು ಪಾವತಿಸಲು ಹಾಗೂ ಡಾ. ಮೂಲಿಮನಿ ಬಾಪುಗೌಡ ಮತ್ತು ಡಾ. ಕರಿಷ್ಮಾ ಮುನೋಳಿ ಇವರಿಗೆ ವೇತನ ಸಹಿತ ವ್ಯಾಸಂಗ ರಜೆಯನ್ನು ಮಂಜೂರು ಮಾಡಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

ಮತ್ತು ಸದರಿ ಸಿಬ್ಬಂದಿಗಳಿಂದ ರಿಮ್ಸ್ ಸಂಸ್ಥೆಯಲ್ಲಿ ಕನಿಷ್ಟ 10 ವರ್ಷಗಳ ಸೇವೆ ಸಲ್ಲಿಸುವುದರ ಬಗ್ಗೆ ನೋಟರಿ ಮಾಡಿಸಲಾದ ಬಾಂಡ್ ಪೇಪರ್ (ಮುಚ್ಚಳಿಕೆ) ಪಡೆದು ಮುಂದಿನ ಕ್ರಮ ಕೈಗೊಳ್ಳುವಂತೆ ಸಭೆಯು ನಿರ್ದೇಶಿಸಿತು.

| | |
|---|---|
| ವಿಷಯ ಸೂಚಿ ಸಂಖ್ಯೆ - 24 : | ರಿಮ್ಸ್ ವೈದ್ಯಕೀಯ ಕಾಲೇಜು ಮತ್ತು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಉದ್ಭವಿಸುವ ಪ್ಲಂಬಿಂಗ್, ವಿದ್ಯುತ್ ಹಾಗೂ ಇನ್ನಿತರ ದುರಸ್ಥಿಗಳ ವಾರ್ಷಿಕ ನಿರ್ವಹಣೆಯನ್ನು ನಿಯಮಾನುಸಾರ ಕೈಗೊಳ್ಳಲು ಅನುಮತಿ ನೀಡುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 520 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯನ್ನು ರೂ. 84.00 ಕೋಟಿಗಳ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ಮಾಣ ಮಾಡಲಾಗಿದ್ದು, ದಿನಾಂಕ 24.11.2014 ರಂದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಉದ್ಘಾಟನೆಯಾಗಿ ಸಾರ್ವಜನಿಕರ ಸೇವೆಗೆ ನೀಡಲಾಗಿರುತ್ತದೆ. ಸದರಿ ಆಸ್ಪತ್ರೆಯು ನೆಲಮಹಡಿಯಿಂದ ಒಟ್ಟು 06 ಮಹಡಿಗಳನ್ನು ಹೊಂದಿರುತ್ತದೆ. ಪ್ರಸ್ತುತ ವೈದ್ಯಕೀಯ ಕಾಲೇಜು ಪ್ರಾರಂಭವಾಗಿ 10 ವರ್ಷಗಳಾಗಿದ್ದು, ಹಾಗೂ ಆಸ್ಪತ್ರೆಯ ಪ್ರಾರಂಭವಾಗಿ ನಾಲ್ಕು ವರ್ಷಗಳಾಗಿರುವುದರಿಂದ ಪ್ರತಿ ನಿತ್ಯ ಪ್ಲಂಬಿಂಗ್ ಹಾಗು ವಿದ್ಯುತ್‌ಗೆ ಸಂಬಂಧಿಸಿದ ಸಮಸ್ಯಗಳು ಉದ್ಭವಿಸುತ್ತವೆ ಇವೆ. ಅದರೂ ಪ್ಲಂಬಿಂಗ್ ಹಾಗೂ ವಿದ್ಯುತ್‌ಗೆ ಸಂಬಂಧಿಸಿದ ಸಮಸ್ಯಗಳನ್ನು ತಾತ್ಕಲಿಕವಾಗಿ ನಿವಾರಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಆಸ್ಪತ್ರೆಯಲ್ಲಿ ಉದ್ಭವಿಸುವ ಪ್ಲಂಬಿಂಗ್, ವಿದ್ಯುತ್ ಹಾಗೂ ಇನ್ನಿತರ ಸಿವಿಲ್ ಕಾಮಗಾರಿಗಳನ್ನು ಕಟ್ಟಡ ನಿರ್ಮಾಣಕ್ಕೆ ವೆಚ್ಚವಾದ ಅನುದಾನಕ್ಕೆ 2% ರಂತೆ ವಾರ್ಷಿಕವಾಗಿ ರೂ. 1,68,00,000/- ಗಳನ್ನು ನಿಗದಿಪಡಿಸಿಕೊಂಡು ವಾರ್ಷಿಕ ನಿರ್ವಹಣೆಯನ್ನು ಕೈಗೊಳ್ಳಬಹುದಾಗಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಉದ್ಭವಿಸುವ ಪ್ಲಂಬಿಂಗ್, ವಿದ್ಯುತ್ ಹಾಗೂ ಇನ್ನಿತರ ದುರಸ್ಥಿಗಳ ವಾರ್ಷಿಕ ನಿರ್ವಹಣೆಯನ್ನು ನಿಯಮಾನುಸಾರ KHSRDP ಮುಖಾಂತರ ಅಂದಾಜು ಪಟ್ಟಿಯನ್ನು ಪಡೆದು KHSRDP ಮುಖಾಂತರವಾಗಲಿ ಅಥವಾ ಸಂಸ್ಥೆಯ ಮುಖಾಂತರವಾಗಲಿ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲು ಅನುಮತಿ



Director
RIMS, Raichur

ನೀಡುವಂತೆ ಹಾಗೂ ರಿಮ್ಸ್ ವೈದ್ಯಕೀಯ ಕಾಲೇಜಿಗೆ ಸಂಬಂಧಿಸಿದ ನಿರ್ವಹಣೆಯನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಮುಖಾಂತರ ಕೈಗೊಳ್ಳಲು ಮತ್ತು ಆಸ್ಪತ್ರೆಗೆ ಸಂಬಂಧಿಸಿದ ನಿರ್ವಹಣೆಯನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿಯಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಉದ್ಭವಿಸುವ ಪ್ಲಂಬಿಂಗ್, ವಿದ್ಯುತ್ ಹಾಗೂ ಇನ್ನಿತರ ದುರಸ್ಥಿಗಳನ್ನು ಶಾಶ್ವತವಾಗಿ ಪರಿಹರಿಸುವ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಹೆಚ್.ಎಸ್.ಡಿ.ಆರ್.ಪಿ / ಆಕುಕ ಇಲಾಖೆ ಇಂಜಿನಿಯರಿಂಗ್ ವಿಭಾಗ, ಉಪವಿಭಾಗ, ರಾಯಚೂರು ಮುಖಾಂತರ ಅವಶ್ಯವಿರುವ ಪ್ರಮುಖ ಕಾಮಗಾರಿಗಳಿಗೆ **(Major works)** ಮಾತ್ರ ವಿವರವಾದ ಅಂದಾಜು ಪಟ್ಟಿಯನ್ನು ಪಡೆದು ಅಗತ್ಯ ಕ್ರಮ ಕೈಗೊಳ್ಳುವಂತೆ ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 25: | ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಚತಾ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮದಂತೆ ವಿಡಿಎ ಪಾವತಿಸಲು ಅನುಮತಿ ನೀಡುವ ಬಗ್ಗೆ |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ 196 ಸ್ವಚ್ಚತಾ ಸಿಬ್ಬಂದಿಗಳ ಸೇವೆಯನ್ನು ನಿಯಮಾನುಸಾರ ಹೊರಗುತ್ತಿಗೆ ಮೂಲಕ ಸೇವೆಯನ್ನು ಪಡೆಯಲಾಗಿದ್ದು, ಸದರಿ ಸ್ವಚ್ಚತಾ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕಾರ್ಮಿಕ ಕನಿಷ್ಠ ವೇತನ ಕಾಯ್ದೆಯನ್ವಯ ವೇತನವನ್ನು ಪಾವತಿಸಲಾಗುತ್ತಿದೆ.

ಕಾರ್ಮಿಕ ಇಲಾಖೆ ಆದೇಶ ಸಂಖ್ಯೆ ಕೆಎಇ / 125 / ಎಲ.ಎಂ.ಡಬ್ಲೂ / 2015 ದಿನಾಂಕ 06.01.2017 ರನ್ವಯ ವಿಡಿಎ ಯನ್ನು ರೂ. 412.62 ಗಳಿಗೆ ಹೆಚ್ಚಳ ಮಾಡಲಾಗಿರುತ್ತದೆ.

| ಕ್ರಮ ಸಂಖ್ಯೆ | ಸ್ವಚ್ಚತಾ ಸಿಬ್ಬಂದಿಗಳ ಸಂಖ್ಯೆ | ಕಾರ್ಮಿಕ ಇಲಾಖೆಯಿಂದ ಏಪ್ರೀಲ್ – 2017 ರಿಂದ ಹೆಚ್ಚಿಸಿರುವ ವಿಡಿಎ ಮೊತ್ತ | ಪ್ರತಿ ತಿಂಗಳಿಗೆ ಪ್ರತಿ ಸಿಬ್ಬಂದಿಗೆ | ಒಟ್ಟು 196 ಸ್ವಚ್ಚತಾ ಸಿಬ್ಬಂದಿಗಳಿಗೆ ಪ್ರತಿ ತಿಂಗಳಿಗೆ ಪಾವತಿಸ ಬೇಕಾಗಿರುವ ವಿಡಿಎ ಮೊತ್ತ | ಏಪ್ರಿಲ್ – 2017 ರಿಂದ ಅಗಸ್ಟ್ – 2017 ರವರೆಗೆ ಪಾವತಿಸ ಬೇಕಾಗಿರುವ ಮೊತ್ತ |
|---|---|---|---|---|---|
| 01 | 196 | ರೂ. 412.62 | ರೂ. 412.62 | ರೂ. 80,874/– | ರೂ. 4,04,368/– |

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸ್ವಚ್ಚತೆಯ ನಿಮಿತ್ತ ಪಡೆಯಲಾಗಿರುವ 196 ಸ್ವಚ್ಚತಾ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮದಂತೆ ಏಪ್ರಿಲ್ – 2017 ರಿಂದ ಅಗಸ್ಟ್ – 2017 ರವರೆಗಿನ ವಿ.ಡಿ.ಎ ವ್ಯತ್ಯಾಸದ ಮೊತ್ತ ರೂ. 4,04,368/– ಗಳನ್ನು ಪಾವತಿಸಲು ಹಾಗೂ ಸೆಪ್ಟಂಬರ್ – 2017 ರಿಂದ ವೇತನದಲ್ಲಿ ವಿ.ಡಿ.ಎ ಯನ್ನು ಅಳವಡಿಸಿ ಪಾವತಿಸಲು ಮತ್ತು ಈ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210–05–105–1–54–103 ಅಡಿಯಲ್ಲಿ ಬಿಡುಗಡೆಯಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸ್ವಚ್ಚತೆಯ ನಿಮಿತ್ತ ಹೊರಗುತ್ತಿಗೆ ಮೂಲಕ ಮೆ॥ ಬಿ.ಕೆ.ಆರ್. ಸ್ವಾಮಿ ಸೆಕ್ಯೂರಿಟಿ ಏಜನ್ಸಿಸ್ ಇವರಿಂದ ಪಡೆಯಲಾಗಿರುವ ಸ್ವಚ್ಚತಾ ಟೆಂಡರ್‌ಗೆ ಹಳೆಯ ಟೆಂಡರ್ ದರಗಳ ಪ್ರಕಾರ ವೇತನವನ್ನು ಪಾವತಿಸಿರುವುದರಿಂದ ವಿ.ಡಿ.ಎ ಮೊತ್ತವನ್ನು ಪಾವತಿಸದೇ ಇರಲು ಸಭೆಯು ತೀರ್ಮಾನಿಸಿತು.

Director
RIMS, Raichur

| ವಿಷಯ ಸೂಚಿ ಸಂಖ್ಯೆ – 26 : | ರಿಮ್ಸ್ ಆವರಣದಲ್ಲಿರುವ ದ್ರವ ತ್ಯಾಜ್ಯ ಘಟಕದ ಪಕ್ಕದಲ್ಲಿ ಲಾಂಡ್ರಿ ಘಟಕ ಹಾಗೂ ನೀರು ಸಂಗ್ರಹಣಾ ಮೇಲ್ ತೊಟ್ಟಿಯನ್ನು ನಿರ್ಮಾಣ ಮಾಡಲು ಕೈಗೊಂಡಿರುವ ಟೆಂಡರ್ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು. |
|---|---|

1) ಲಾಂಡ್ರಿ ಘಟಕ :–

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 600 ಕೆಎಲ್‌ಡಿ ಸಾಮಾರ್ಥ್ಯದ ದ್ರವ ತ್ಯಾಜ್ಯ ಘಟಕವನ್ನು ನಿರ್ಮಾಣ ಮಾಡಲಾಗಿದ್ದು, ಘಟಕದಲ್ಲಿ ಶುದ್ದೀಕರಿಸಿದ ನೀರನ್ನು ಉದ್ಯಾನವನಗಳಿಗೆ ಬಳಕೆ ಮಾಡಲಾಗುತ್ತಿದ್ದು, ಇದರಲ್ಲಿ ಇನ್ನು ಶೇ 50% ರಷ್ಟು ನೀರು ಚರಂಡಿ ಪೋಲಾಗುತ್ತಿದೆಯಂದು ತಿಳಿಸಿ, ಸದರಿ ದ್ರವ ತ್ಯಾಜ್ಯ ಘಟಕದ ಪಕ್ಕದಲ್ಲಿ ಲಾಂಡ್ರಿ ಘಟಕವನ್ನು ನಿರ್ಮಾಣ ಮಾಡಿದಲ್ಲಿ ಸಂಪೂರ್ಣವಾಗಿ ಶುದ್ದೀಕರಿಸಿದ ನೀರನ್ನು ಸದುಪಯೋಗ ಮಾಡಿಕೊಳ್ಳಬಹುದೆಂದು ತಿಳಿಸಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಪತ್ರ ಸಂಖ್ಯೆ ಆಕುಕ / 43 / ಎಂಎಂಇ / 2016 ದಿನಾಂಕ 27.04.2016ರನ್ವಯ ರಿಮ್ಸ್ ಆವರಣದಲ್ಲಿರುವ ದ್ರವ ತ್ಯಾಜ್ಯ ಘಟಕದ ಪಕ್ಕದಲ್ಲಿ ಲಾಂಡ್ರಿ ಘಟಕವನ್ನು ನಿರ್ಮಾಣ ಮಾಡುವ ಸಂಬಂಧ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಕರೆಯಲು ಅನುಮತಿಯನ್ನು ನೀಡಲಾಗಿರುತ್ತದೆ.

ಸರ್ಕಾರದ ನಿರ್ದೇಶನದಂತೆ ಈ ಕಾರ್ಯಾಲಯದ ಪತ್ರ ಸಂಖ್ಯೆ ರಿಮ್ಸ್ / ಸಾಮಾನ್ಯ / ಲಾಂಡ್ರಿ / 2017–18 / 89 ದಿನಾಂಕ 03.07.2017ರನ್ವಯ ಅಲ್ಪಾವಧಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಿ, ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ ಮೆ॥ ಟೆಕ್ಸೋಲ್ ಇಂಜಿನಿಯರ್ಸ್, ಬೆಂಗಳೂರು ಇವರು ಟೆಂಡರ್‌ನ ಎಲ್ಲಾ ಷರತ್ತುಗಳನ್ನು ಪೂರೈಸಿ, ಸದರಿ ಕಾರ್ಯಕ್ಕೆ ರೂ. 4,59,737/– ಗಳ ದರವನ್ನು ನಮೂದಿಸಿ, ಎಲ್1 ಟೆಂಡರ್‌ದಾರರಾಗಿರುವುದರಿಂದ ಮೆ॥ ಟೆಕ್ಸೋಲ್ ಇಂಜಿನಿಯರ್ಸ್, ಬೆಂಗಳೂರು ಇವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

2) ಲಾಂಡ್ರಿ ಘಟಕಕ್ಕೆ ಅವಶ್ಯವಿರುವ ನೀರು ಸಂಗ್ರಹಣಾ ಮೇಲ್ ತೊಟ್ಟಿಯನ್ನು ನಿರ್ಮಾಣ ಮಾಡುವ ಬಗ್ಗೆ.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 600 ಕೆಎಲ್‌ಡಿ ಸಾಮಾರ್ಥ್ಯದ ದ್ರವ ತ್ಯಾಜ್ಯ ಘಟಕವನ್ನು ಲಾಂಡ್ರಿ ಘಟಕಕ್ಕೆ ಅವಶ್ಯವಿರುವ 50 ಕೆ.ಎಲ್.ಡಿ ಸಾಮಾರ್ಥ್ಯದ ನೀರು ಸಂಗ್ರಹಣಾ ಮೇಲ್‌ತೊಟ್ಟಿಯ ಅವಶ್ಯಕತೆಯಿರುವುದರಿಂದ 50 ಕೆ.ಎಲ್.ಡಿ. ಸಾಮಾರ್ಥ್ಯದ ನೀರು ಸಂಗ್ರಹಣಾ ಮೇಲ್ ತೊಟ್ಟಿಯನ್ನು ನಿರ್ಮಾಣ ಮಾಡಲು ಅಂದಾಜು ಪಟ್ಟಿಯನ್ನು ಪಡೆದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಪತ್ರ ಸಂಖ್ಯೆ ಆಕುಕ / 36 / ಎಂಎಂಇ / 2016 ದಿನಾಂಕ 25.04.2016ರನ್ವಯ ರಿಮ್ಸ್ ಆವರಣದಲ್ಲಿರುವ ದ್ರವ ತ್ಯಾಜ್ಯ ಘಟಕದ ಪಕ್ಕದಲ್ಲಿರುವ ಲಾಂಡ್ರಿ ಘಟಕಕ್ಕೆ ಅವಶ್ಯವಿರುವ 50 ಕೆ.ಎಲ್.ಡಿ ಸಾಮಾರ್ಥ್ಯದ ನೀರು ಸಂಗ್ರಹಣಾ ಮೇಲ್ ತೊಟ್ಟಿಯನ್ನು ನಿರ್ಮಾಣ ಮಾಡಲು ರೂ. 4,81,096/– ಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಸರ್ಕಾರದ ನಿರ್ದೇಶನದಂತೆ ಈ ಕಾರ್ಯಾಲಯದ ಪತ್ರ ಸಂಖ್ಯೆ ರಿಮ್ಸ್ / ಸಾಮಾನ್ಯ / ಮೇಲ್‌ತೊಟ್ಟಿ / 2017–18 / 90 ದಿನಾಂಕ 03.07.2017 ರನ್ವಯ ಅಲ್ಪಾವಧಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಿ, ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಒಟ್ಟು 03 ಟೆಂಡರ್‌ದಾರರು 1) ಮೆ॥ ಟೆಕ್ಸೋಲ್ ಇಂಜಿನಿಯರ್ಸ್, ಬೆಂಗಳೂರು, 2) ಮೆ॥ ಶರಣ ಬಸವರಾಜ್ ಹೊಗಿ ಬಂಡಿ, ಸಿಂಧನೂರು ಮತ್ತು ಮೆ॥ ಸುಗುಣ ಬಿಲ್ಡರ್ಸ್, ಶಿವಮೊಗ್ಗ ಇವರುಗಳು ಭಾಗವಹಿಸಿದ್ದರು. ಆದರೆ ಸದರಿ 03 ಟೆಂಡರ್‌ದಾರರು ಟೆಂಡರ್ ಷರತ್ತಿನ್ವಯ ಸೂಕ್ತ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ದಿನಾಂಕ 24.07.2017 ರಂದು ಜರುಗಿದ ಟೆಂಡರ್ ಪರಿಶೀಲನಾ ಸಮಿತಿ ಸಭೆಯು ಮರು ಟೆಂಡರ್ ಆಹ್ವಾನಿಸಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿರುತ್ತದೆ.

Director
RIMS, Raichur

ಕಾರಣ ಸರ್ಕಾರದ ನಿರ್ದೇಶನದಂತೆ, ರಿಮ್ಸ್ ಆವರಣದಲ್ಲಿನ ದ್ರವ ತ್ಯಾಜ್ಯ ಘಟಕದ ಪಕ್ಕದಲ್ಲಿ ಲಾಂಡ್ರಿ ಘಟಕವನ್ನು ನಿರ್ಮಾಣ ಮಾಡಲು ಕೈಗೊಂಡಿರುವ ಟೆಂಡರ್ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ನೀಡಿ, ಲಾಂಡ್ರಿ ಘಟಕಕ್ಕೆ ಅವಶ್ಯವಿರುವ 50 ಕೆ.ಎಲ್.ಡಿ ಸಾಮರ್ಥ್ಯದ ನೀರು ಸಂಗ್ರಹಣಾ ಮೇಲ್ ತೊಟ್ಟಿಯನ್ನು ನಿರ್ಮಾಣ ಮಾಡುವ ಬಗ್ಗೆ ಮರು ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಆವರಣದಲ್ಲಿನ ದ್ರವ ತ್ಯಾಜ್ಯ ಘಟಕದ ಪಕ್ಕದಲ್ಲಿ ಲಾಂಡ್ರಿ ಘಟಕವನ್ನು ನಿರ್ಮಾಣ ಮಾಡಲು ಕೈಗೊಂಡಿರುವ ಟೆಂಡರ್ ಪ್ರಕ್ರಿಯೆಗೆ ಘಟನೋತ್ತರ ಅನುಮೋದನೆ ನೀಡಲಾಯಿತು ಹಾಗೂ ಲಾಂಡ್ರಿ ಘಟಕಕ್ಕೆ ಅವಶ್ಯವಿರುವ 50 ಕೆ.ಎಲ್.ಡಿ ಸಾಮರ್ಥ್ಯದ ನೀರು ಸಂಗ್ರಹಣಾ ಮೇಲ್ ತೊಟ್ಟಿಯನ್ನು ಅಳವಡಿಸುವ ಸಂಬಂಧ ಮರು ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಅತಿ ಅವಶ್ಯಕ ಸೇವೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ, ಕೃಷ್ಣಾ ನದಿಯಿಂದ ರಾಯಚೂರು ನಗರಕ್ಕೆ ಹಾದು ಹೋಗಿರುವ ನಗರ ಸಭೆಯ ಕುಡಿಯುವ ನೀರಿನ ಪೈಪ್ ಲೈನ್ ಮುಖಾಂತರ ನೇರವಾಗಿ ದಿನದ 24 ಗಂಟೆ ಶುದ್ಧ ಕುಡಿಯುವ ನೀರನ್ನು ಪೂರೈಸುವ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರಿಗೆ ಪ್ರಸ್ತಾವನೆ ಸಲ್ಲಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಮಾನ್ಯ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ನಿರ್ದೇಶನ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 27 : | ಆರೋಗ್ಯ ಮತ್ತು ಕುಟುಂಬ ಇಲಾಖೆಯಿಂದ ನಿಯೋಜನೆ ಹೊಂದಿ, ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ, ವಯೋನಿವೃತ್ತಿ ಹೊಂದಿರುವ ವೈದ್ಯರುಗಳ ಗಳಿಕೆ ರಜೆಗಳನ್ನು ನಗದೀಕರಣಗೊಳಿಸಲು ಅನುಮತಿ ನೀಡುವ ಬಗ್ಗೆ. |

2009 ರ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ ಆಕುಕ / 395 / ಎಂಎಂಪಿ / 2007 ದಿನಾಂಕ 28.02.2009 ರನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ತಜ್ಞ ವೈದ್ಯರುಗಳ ಸೇವೆಯನ್ನು ರಿಮ್ಸ್ ಸಂಸ್ಥೆಯಲ್ಲಿ ವಿಲೀನಗೊಳಿಸಿದ್ದು, ಸದರಿ ವೈದ್ಯರುಗಳು ಅಂದಿನಿಂದ ವಯೋ ನಿವೃತ್ತಿಯಾಗುವವರೆಗೆ ಇದೇ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿರುತ್ತಾರೆ. ನಿವೃತ್ತಿಯ ಸಮಯದಲ್ಲಿ ಸದರಿ ವೈದ್ಯರುಗಳ ಹಕ್ಕಿನಲ್ಲಿ 300 ರಜೆಗಳು ಲಭ್ಯವಿದ್ದು, ಸದರಿ ಗಳಿಕೆ ರಜೆಗಳನ್ನು ನಗದೀಕರಣಗೊಳಿಸಿ ಕೊಡುವಂತೆ ಕೋರಿ ಈ ಕೆಳಕಂಡ ವೈದ್ಯರುಗಳು ರಿಮ್ಸ್ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ವೈದ್ಯರುಗಳ ಹೆಸರು | ಪದನಾಮ | ಕಾರ್ಯನಿರ್ವಹಿಸುತ್ತಿದ್ದ ವಿಭಾಗ |
|---|---|---|---|
| 01 | ಡಾ. ಶೋಭಾ ನಾಯಕ್ | ಸಹಾಯಕ ಪ್ರಾಧ್ಯಾಪಕರು | ಶಸ್ತ್ರಚಿಕಿತ್ಸಾ ವಿಭಾಗ |
| 02 | ಡಾ. ಶಿವನಾಗಮ್ಮ | ಸಹಾಯಕ ಪ್ರಾಧ್ಯಾಪಕರು | ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ |
| 03 | ಡಾ. ಶಂಕ್ರಪ್ಪ ಮುದಗಲ್ | ಪ್ರಾಧ್ಯಾಪಕರು | ವೈದ್ಯಶಾಸ್ತ್ರ ವಿಭಾಗ |

ಕಾರಣ ಆರೋಗ್ಯ ಮತ್ತು ಕುಟುಂಬ ಇಲಾಖೆಯಿಂದ ನಿಯೋಜನೆ ಹೊಂದಿ, ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ, ವಯೋನಿವೃತ್ತಿ ಹೊಂದಿರುವ ಮೇಲ್ಕಂಡ 03 ವೈದ್ಯರುಗಳ 300 ಗಳಿಕೆ ರಜೆಗಳನ್ನು ನಗದೀಕರಣಗೊಳಿಸಲು ಅನುಮತಿ ನೀಡುವಂತೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಆರೋಗ್ಯ ಮತ್ತು ಕುಟುಂಬ ಇಲಾಖೆಯಿಂದ ನಿಯೋಜನೆ ಹೊಂದಿ, ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ, ವಯೋನಿವೃತ್ತಿ ಹೊಂದಿರುವ ಡಾ. ಶೋಭಾ ನಾಯಕ್, ಡಾ. ಶಿವನಾಗಮ್ಮ ಮತ್ತು ಡಾ. ಶಂಕ್ರಪ್ಪ ಮುದಗಲ್ ವೈದ್ಯರುಗಳ 300 ಗಳಿಕೆ ರಜೆಗಳನ್ನು ನಿಯಮಾನುಸಾರ ನಗದೀಕರಣಗೊಳಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.



Director
RIMS, Raichur

| ವಿಷಯ ಸೂಚಿ ಸಂಖ್ಯೆ – 28 : | ರಿಮ್ಸ್ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗದಲ್ಲಿ ಸಿಟಿ ಸ್ಕ್ಯಾನ್ ಉಪಕರಣವು ದುರಸ್ಥಿಯಲ್ಲಿದ್ದರಿಂದ ಮೆ॥ ರಾಯಚೂರು ಮೆಡಿಕಲ್ ಸರ್ವಿಸ್ ಪ್ರೈ. ಲಿಮಿಟೆಡ್ ಇವರಿಂದ ಆಸ್ಪತ್ರೆಯಲ್ಲಿನ ರೋಗಿಗಳಿಗೆ ವಿವಿಧ ದಿನಾಂಕಗಳಂದು ತುರ್ತು ಅವಶ್ಯಕತೆ ಮೇರೆಗೆ ಸಿಟಿ ಸ್ಕ್ಯಾನ್ ಮಾಡಿಸಲಾಗಿದ್ದು, ಘಟನೋತ್ತರ ಅನುಮೋದನೆ ನೀಡುವ ಬಗ್ಗೆ. |
|---|---|

ರಿಮ್ಸ್ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗದಲ್ಲಿ ಸಿಟಿ ಸ್ಕ್ಯಾನ್ ಉಪಕರಣವು ದುರಸ್ಥಿಯಲ್ಲಿದ್ದರಿಂದ ಮತ್ತು ಸಿಟಿ ಸ್ಕ್ಯಾನ್ ಉಪಕರಣದ ದುರಸ್ಥಿಗೆ ಸಾಕಷ್ಟು ವಿಳಂಬವಾಗುವ ಸಾಧ್ಯತೆಯಿದ್ದುದರಿಂದ, ಆ ಸಮಯದಲ್ಲಿ ರೋಗಿಗಳ ಚಿಕಿತ್ಸೆಗೆ ಯಾವುದೇ ರೀತಿ ತೊಂದರೆಯಾಗದಂತೆ, ಮೆ॥ ರಾಯಚೂರು ಮೆಡಿಕಲ್ ಸರ್ವಿಸ್ ಪ್ರೈ. ಲಿಮಿಟೆಡ್ ಇವರ ಮಧ್ಯೆ ಆಗಿನ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಏರ್ಪಟ್ಟ **Unconditional MOU** ಮಾಡಿಕೊಂಡ ಹಿನ್ನಲೆಯಲ್ಲಿ ರೋಗಿಗಳ ಹಿತದೃಷ್ಟಿಯಿಂದ ಸಿಟಿ ಸ್ಕ್ಯಾನ್ ತುಂಬಾ ಅನಿವಾರ್ಯವಿದ್ದರಿಂದ ವಿವಿಧ ದಿನಾಂಕಗಳಂದು ತುರ್ತು ಅವಶ್ಯಕತೆ ಮೇರೆಗೆ ಸಿಟಿ ಸ್ಕ್ಯಾನ್ ಮಾಡಿಸಲಾಗಿದೆಯೆಂದು ಮತ್ತು ಇದಕ್ಕೆ ಒಟ್ಟು ರೂ. 15,57,714/– ಗಳು ವೆಚ್ಚವಾಗಿರುವುದಾಗಿ ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರು ಪತ್ರ ಸಂಖ್ಯೆ ರಿಮ್ಸ್ / ಬೋಆರಾ / ಲೆಪ–1 / 2017–18 / 276 ದಿನಾಂಕ 08.08.2017 ರ ಪತ್ರದಲ್ಲಿ ತಿಳಿಸಿರುತ್ತಾರೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ತುರ್ತು ಅವಶ್ಯಕತೆ ಮೇರೆಗೆ ಮೆ॥ ರಾಯಚೂರು ಮೆಡಿಕಲ್ ಸರ್ವಿಸ್ ಪ್ರೈ. ಲಿಮಿಟೆಡ್ ಇವರಿಂದ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳಿಗೆ ಸಿಟಿ ಸ್ಕ್ಯಾನ್ ಸೌಲಭ್ಯವನ್ನು ಮೆ॥ ರಾಯಚೂರು ಮೆಡಿಕಲ್ ಸರ್ವಿಸ್ ಪ್ರೈ. ಲಿಮಿಟೆಡ್ ನೀಡಿರುವ ಬಗ್ಗೆ ಮತ್ತು ಅದಕ್ಕೆ ವೆಚ್ಚವಾಗಿರುವ ರೂ. 15,57,714/– ಗಳಿಗೆ ಘಟನೋತ್ತರ ಅನುಮೋದನೆ ನೀಡುವಂತೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ತುರ್ತು ಅವಶ್ಯಕತೆ ಮೇರೆಗೆ ಮೆ॥ ರಾಯಚೂರು ಮೆಡಿಕಲ್ ಸರ್ವಿಸ್ ಪ್ರೈ. ಲಿಮಿಟೆಡ್ ಇವರಿಂದ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳಿಗೆ ಸಿಟಿ ಸ್ಕ್ಯಾನ್ ಸೌಲಭ್ಯವನ್ನು ಮೆ॥ ರಾಯಚೂರು ಮೆಡಿಕಲ್ ಸರ್ವಿಸ್ ಪ್ರೈ. ಲಿಮಿಟೆಡ್ (ರಾಯಚೂರು ಡಯಾಗ್ನಾಸ್ಟಿಕ್ ಸೆಂಟರ್, ರಾಯಚೂರು) ಇವರಿಂದ ಪಡೆದಿರುವ ಬಗ್ಗೆ ಮತ್ತು ಅದಕ್ಕೆ ವೆಚ್ಚವಾಗಿರುವ ರೂ. 15,57,714/– ಗಳನ್ನು ಆರ್ಥಿಕ ಸಮಿತಿಯು ಪರಿಶೀಲಿಸಿ, ಕಡತದಲ್ಲಿ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಯಿತು.

| ವಿಷಯ ಸೂಚಿ ಸಂಖ್ಯೆ – 29 : | ರಿಮ್ಸ್ ವೈದ್ಯಕೀಯ ಕಾಲೇಜು, ವಿದ್ಯಾರ್ಥಿಗಳ ವಸತಿ ನಿಲಯಗಳ ಪಕ್ಕದಲ್ಲಿ **Parking Slot** ಗಳನ್ನು ನಿರ್ಮಾಣ ಮಾಡಲು ಅನುಮತಿ ನೀಡುವ ಬಗ್ಗೆ |
|---|---|

ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ದ್ವಿ–ಚಕ್ರ ಮತ್ತು ತ್ರಿ – ಚಕ್ರ ವಾಹನಗಳನ್ನು ಸಂಸ್ಥೆಯ ಮುಂಭಾಗದಲ್ಲಿ ಎಲ್ಲೆಂದರಲ್ಲಿ ನಿಲುಗಡೆ ಮಾಡುತ್ತಿದ್ದು, ಸಿಬ್ಬಂದಿಗಳಿಗೆ, ವಿದ್ಯಾರ್ಥಿಗಳಿಗೆ ತಿಳಿ ಹೇಳಿದರೂ ಸಹ ಸದರಿಯವರು ನೆರಳಿಲ್ಲದೆ ಬೈಕ್ ಮತ್ತು ಕಾರ್‌ಗಳನ್ನು ಎಲ್ಲಿ ನಿಲ್ಲಿಸಬೇಕೆಂದು ಮತ್ತು ಪ್ರಕರತೆಯಿರುವ ಬಿಸಿಲಿಗೆ ಗಾಡಿಯಲ್ಲಿ ಪೆಟ್ರೋಲ್ ಆವಿಯಾಗುವುದು ಮತ್ತು ಬೆಂಕಿ ಅವಗಢಗಳು ಸಂಭವಿಸುತ್ತವೆಯೆಂದು ಗೃಹ ರಕ್ಷಕರ ದಳದ ಸಿಬ್ಬಂದಿಯವರನ್ನೇ ಪ್ರಶ್ನಿಸುತ್ತಾರೆ. ಇದರಿಂದಾಗಿ ಪ್ರತಿ ನಿತ್ಯ ಸಿಬ್ಬಂದಿಗಳೊಂದಿಗೆ ವಾದವನ್ನು ನಡೆಸುವಂತಾಗಿದೆ. ಈ ಹಿನ್ನಲೆಯಲ್ಲಿ ವೈದ್ಯಕೀಯ ಕಾಲೇಜಿನ ಕಟ್ಟಡದ ಶರೀರ ಕ್ರೀಯಾ ಶಾಸ್ತ್ರ ವಿಭಾಗದ ಪಕ್ಕದಲ್ಲಿ ಖಾಲಿಯಿರುವ ಸ್ಥಳದಲ್ಲಿ ಹಾಗೂ ವಿದ್ಯಾರ್ಥಿಗಳ ವಸತಿ ನಿಲಯಗಳ ಪಕ್ಕದಲ್ಲಿ ಪಾರ್ಕಿಂಗ್ ಸ್ಲಾಟ್‌ಗಳನ್ನು ನಿರ್ಮಿಸಿದಲ್ಲಿ ವಿದ್ಯಾರ್ಥಿಗಳಿಗೆ, ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ. ಈ ಹಿನ್ನಲೆಯಲ್ಲಿ ಮೆ॥ ಕ್ಯಾಷುಟೆಕ್ ಇವರಿಗೆ ಸ್ಥಳಕ್ಕೆ ಭೇಟಿ ನೀಡಿ, ವೈದ್ಯಕೀಯ ಕಾಲೇಜು ಹಾಗೂ ವಿದ್ಯಾರ್ಥಿಗಳ ವಸತಿ ನಿಲಯಗಳ ಪಕ್ಕದಲ್ಲಿ



Director
RIMS, Raichur

ಪಾರ್ಕಿಂಗ್ ಸ್ಲಾಟ್‌ಗಳನ್ನು ನಿರ್ಮಾಣ ಮಾಡುವ ಸಂಬಂಧ ಅಂದಾಜು ಪಟ್ಟಿಗಳನ್ನು ಸಲ್ಲಿಸುವಂತೆ ಕೋರಲಾಗಿತ್ತು. ಸದರಿಯವರು ದಿನಾಂಕ 08.09.2017 ರಂದು ರಿಮ್ಸ್ ಕಾರ್ಯಲಯಕ್ಕೆ ಈ ಕೆಳಗಿನಂತೆ ಅಂದಾಜು ಪಟ್ಟಿಗಳನ್ನು ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ಪಾರ್ಕಿಂಗ್ ಸ್ಲಾಟ್‌ಗಳನ್ನು ನಿರ್ಮಾಣ ಮಾಡಬೇಕಾದ ಸ್ಥಳ | ಅಂದಾಜು ಪಟ್ಟಿಯ ಮೊತ್ತ |
|---|---|---|
| 01 | ರಿಮ್ಸ್ ವೈದ್ಯಕೀಯ ಕಾಲೇಜು | ರೂ. 22,92,000/- |
| 02 | ವಿದ್ಯಾರ್ಥಿಗಳ ವಸತಿ ನಿಲಯ | ರೂ. 22,92,000/- |
| 03 | ವಿದ್ಯಾರ್ಥಿನಿಯರ ವಸತಿ ನಿಲಯ | ರೂ. 22,92,000/- |
| | ಒಟ್ಟು ಮೊತ್ತ | ರೂ. 68,76,000/- |

ಮೆ॥ ಕ್ಯಾಷುಟೆಕ್ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರಿ ಅಧಿಸೂಚನೆ ಸಂಖ್ಯೆ ವಇ / 156 / ಹೆಚ್‌ಎಎಂ / 2009 ದಿನಾಂಕ 29.12.2009 ರಂತೆ ಕಾಮಗಾರಿಗಳನ್ನು ಸದರಿಯವರ ಮುಖಾಂತರ ನೇರವಾಗಿ ಕೈಗೊಳ್ಳಲು ಪಾರದರ್ಶಕತೆ ಕಾಯ್ದೆಯಿಂದ (4ಜಿ) ವಿನಾಯಿತಿ ನೀಡಲಾಗಿರುತ್ತದೆ.

ಕಾರಣ ಸಿಬ್ಬಂದಿಗಳ, ವಿದ್ಯಾರ್ಥಿಗಳ ವಾಹನಗಳ ಭದ್ರತೆ ಮತ್ತು ಸುರಕ್ಷತೆಯ ಹಿತದೃಷ್ಟಿಯಿಂದ ದ್ವಿ – ಚಕ್ರ ಮತ್ತು ತ್ರಿ – ಚಕ್ರ ವಾಹನಗಳನ್ನು ಒಂದೇ ಕಡೆಯಲ್ಲಿ ನಿಲ್ಲಿಸಲು ಅನುಕೂಲವಾಗುವಂತೆ ರಿಮ್ಸ್ ವೈದ್ಯಕೀಯ ಕಾಲೇಜಿನ ಶರೀರ ಕ್ರಿಯಾ ಶಾಸ್ತ್ರದ ಪಕ್ಕದಲ್ಲಿ ಹಾಗೂ ವಿದ್ಯಾರ್ಥಿಗಳ ವಸತಿ ನಿಲಯಗಳ ಪಕ್ಕದಲ್ಲಿ ಪಾರ್ಕಿಂಗ್ ಸ್ಲಾಟ್‌ಗಳನ್ನು ನಿರ್ಮಿಸಲು ಮೆ॥ ಕ್ಯಾಷುಟೆಕ್ ಇವರು ಕ್ರಮ ಸಂಖ್ಯೆ 01 ರಿಂದ 03ರವರೆಗೆ ಸಲ್ಲಿಸಿರುವ ಅಂದಾಜು ಪಟ್ಟಿಗಳಿಗೆ ಅನುಮತಿ ಹಾಗೂ ಪಾರ್ಕಿಂಗ್ ಸ್ಲಾಟ್‌ಗಳನ್ನು ನಿರ್ಮಾಣ ಮಾಡಲು ಸಲ್ಲುವ ವೆಚ್ಚವನ್ನು ಸಂಸ್ಥೆಯ ನಿರ್ವಹಣಾ ಖಾತೆಯಲ್ಲಿ ಉಳಿತಾಯವಾಗಿರುವ ರೂ. 4,40,37,456/- ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಸಂಸ್ಥೆಯಲ್ಲಿ ಸಿಬ್ಬಂದಿಗಳ, ವಿದ್ಯಾರ್ಥಿಗಳ ವಾಹನಗಳ ಭದ್ರತೆ ಮತ್ತು ಸುರಕ್ಷತೆಯ ಹಿತದೃಷ್ಟಿಯಿಂದ ದ್ವಿ – ಚಕ್ರ ಮತ್ತು ತ್ರಿ – ಚಕ್ರ ವಾಹನಗಳನ್ನು ಒಂದೇ ಕಡೆಯಲ್ಲಿ ನಿಲ್ಲಿಸಲು ಅನುಕೂಲವಾಗುವಂತೆ ರಿಮ್ಸ್ ವೈದ್ಯಕೀಯ ಕಾಲೇಜಿನ ಶರೀರ ಕ್ರಿಯಾ ಶಾಸ್ತ್ರದ ಪಕ್ಕದಲ್ಲಿ ಹಾಗೂ ವಿದ್ಯಾರ್ಥಿಗಳ ವಸತಿ ನಿಲಯಗಳ ಪಕ್ಕದಲ್ಲಿ ಪಾರ್ಕಿಂಗ್ ಸ್ಲಾಟ್‌ಗಳನ್ನು ನಿರ್ಮಿಸಲು ಮೆ॥ ಕ್ಯಾಷುಟೆಕ್ ಇವರು ವಿಷಯ ಸೂಚಿಯಲ್ಲಿ ಕ್ರಮ ಸಂಖ್ಯೆ 01 ರಿಂದ 03ರವರೆಗೆ ಸಲ್ಲಿಸಿರುವ ಅಂದಾಜು ಪಟ್ಟಿಗಳನ್ನು ಪರಿಶೀಲಿಸಿ, ಮೆ॥ ಕ್ಯಾಷುಟೆಕ್ ಇವರ ಮುಖಾಂತರ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದಿಸಲಾಯಿತು. ಹಾಗೂ ಪಾರ್ಕಿಂಗ್ ಸ್ಲಾಟ್‌ಗಳನ್ನು ನಿರ್ಮಾಣ ಮಾಡಲು ಸಲ್ಲುವ ವೆಚ್ಚವನ್ನು ಸಂಸ್ಥೆಯ ನಿರ್ವಹಣಾ ಖಾತೆಯಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 30 | ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಇ – ಹಾಸ್ಪಿಟಲ್ ನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ 133 ಗಣಕ ಯಂತ್ರಗಳು ಮತ್ತು 133 ಪ್ರಿಂಟರ್ಸ್‌ಗಳನ್ನು ನಿಯಮಾನುಸಾರ ಖರೀದಿಸಲು ಅನುಮತಿ ನೀಡುವ ಕುರಿತು. |

ರಿಮ್ಸ್ ಬೋಧಕ ಆಸ್ಪತ್ರೆಯಯಲ್ಲಿನ ಓಪಿಡಿ, ತುರ್ತು ನಿಘಾ ಘಟಕ, ವಾರ್ಡ್ಸ್, ಅಪರೇಷನ್ ಥಿಯೇಟರ್, ಲೇಬರ್ ವಾರ್ಡ್, ತುರ್ತು ಚಿಕಿತ್ಸಾ ವಿಭಾಗ, ವೈದ್ಯಕೀಯ ದಾಖಲಾತಿ ವಿಭಾಗ, ವೈದ್ಯಕೀಯ ಅಧಿಕ್ಷಕರು ಕಚೇರಿ, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಯಲ್ಲಿನ ಎಲ್ಲಾ ದಾಖಲೆಗಳನ್ನು ಇ – ಹಾಸ್ಪಿಟಲ್ ಯೋಜನೆ ಅಡಿಯಲ್ಲಿ ವ್ಯವಸ್ಥೆಯನ್ನು ಅಳವಡಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು



Director
RIMS, Raichur

ಇವರು ಪತ್ರ ಸಂಖ್ಯೆ ಎಂಇ / ಟೆಂಡರ್ / 34 / 2017–18 ದಿನಾಂಕ 10.07.2017 ರನ್ವಯ ಸೂಚಿಸಿರುತ್ತಾರೆ. ಸದರಿ ವಿಷಯದ ಕುರಿತು ಈಗಾಗಲೇ ಸರ್ಕಾರದ ಹಂತದಲ್ಲಿ ಹಲವು ಸಭೆಗಳನ್ನು ಜರುಗಿಸಲಾಗಿರುತ್ತದೆ.

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಇ – ಹಾಸ್ಪಿಟಲ್ ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು 133 ಗಣಕ ಯಂತ್ರಗಳು ಹಾಗೂ 133 ಪ್ರಿಂಟರ್ಸ್‌ಗಳು ಮತ್ತು ಎಲ್ಲಾ ಗಣಕ ಯಂತ್ರಗಳಿಗೆ ಅಂತರ್ ಜಾಲದ ಲಾನ್ ಸಂಪರ್ಕವನ್ನು ಕಲ್ಪಿಸಬೇಕಾಗಿರುತ್ತದೆ. ಸದರಿ ಗಣಕ ಯಂತ್ರಗಳನ್ನು ಹಾಗೂ ಪ್ರಿಂಟರ್ಸ್‌ಗಳನ್ನು ಖರೀದಿಸಲು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ರಲ್ಲಿ ರೂ. 4,00,00,000/– ಗಳ ಅನುದಾವು ಉಳಿತಾಯವಾಗಿದ್ದು, ಈ ಸದರಿ ಖಾತೆಯಿಂದ ಈ ವೆಚ್ಚವನ್ನು ಭರಿಸಬಹುದಾಗಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಇ – ಹಾಸ್ಪಿಟಲ್ ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅವಶ್ಯವಿರುವ 133 ಗಣಕ ಯಂತ್ರಗಳು, 133 ಪ್ರಿಂಟರ್ಸ್‌ಗಳು ಮತ್ತು ಎಲ್ಲಾ ಗಣಕ ಯಂತ್ರಗಳಿಗೆ ಅಂತರ್ ಜಾಲದ ಲಾನ್ ಸಂಪರ್ಕವನ್ನು ಕಲ್ಪಿಸಲು ನಿಯಮಾನುಸಾರ ಟೆಂಡರ್ ಆಹ್ವಾನಿಸುವ ಬಗ್ಗೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ರಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಪಾವತಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಇ – ಹಾಸ್ಪಿಟಲ್ ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅವಶ್ಯವಿರುವ 133 ಗಣಕ ಯಂತ್ರಗಳು, 133 ಪ್ರಿಂಟರ್ಸ್‌ಗಳು ಮತ್ತು ಎಲ್ಲಾ ಗಣಕ ಯಂತ್ರಗಳಿಗೆ ಅಂತರ್ ಜಾಲದ ಲಾನ್ ಸಂಪರ್ಕವನ್ನು ಕಲ್ಪಿಸಲು ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಹಾಗೂ ಇದಕ್ಕೆ ಸಲ್ಲುವ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ನಿಧಿ ಖಾತೆ ಸಂಖ್ಯೆ 62334775412 ರಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಪಾವತಿಸಲು ಅನುಮೋದನೆ ನೀಡಲಾಯಿತು.

ಟೆಂಡರ್ ಆಹ್ವಾನಿಸುವ ಪೂರ್ವದಲ್ಲಿ ಸದರಿ ಪ್ರಸ್ತಾವನೆಯನ್ನು ಟ್ಯಾಪ್ (TAP) ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆದುಕೊಳ್ಳುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 31 | ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿ ಅಂಗವಿಕಲ ಅಭ್ಯರ್ಥಿಯಿಂದ ಜೆರಾಕ್ಸ್ ಮಳಿಗೆಯನ್ನು ತೆರಯಲು ಅನುಮತಿ ನೀಡುವ ಕುರಿತು. |

ರಾಯಚೂರು ಜಿಲ್ಲೆಯ ವಿವಿಧ ಮೂಲೆಗಳಿಂದ ಚಿಕಿತ್ಸೆ ಬಯಸಿ ರಿಮ್ಸ್ ಬೋಧಕ ಆಸ್ಪತ್ರೆಗೆ ಬರುವ ರೋಗಿಗಳು, ಕೆಲವೊಂದು ಬಾರಿ ನಿಗದಿತ ಸಮಯದಲ್ಲಿ ಕೆಲವು ದಾಖಲೆಗಳನ್ನು ನೀಡುವುದಿಲ್ಲ. ಉದಾ;– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಡಗದ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆಯನ್ನು ನೀಡಬೇಕಾಗಿದ್ದು, ಚಿಕಿತ್ಸೆ ಪಡೆಯುವ ರೋಗಿಗಳಿಂದ ಜಾತಿ ಪ್ರಮಾಣ ಪತ್ರವನ್ನು ನಾವು ಪಡೆಯಬೇಕಾಗಿರುತ್ತದೆ. ಈಗಾಗಲೇ ಚಿಕಿತ್ಸೆಯ ಸಮಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರವನ್ನು ತೆಗೆದುಕೊಂಡು ಬರುವಂತೆ ಹಲವು ಸುತ್ತೋಲೆಗಳನ್ನು ಹೊರಡಿಸಲಾಗಿದೆ ಹಾಗೂ ಆಸ್ಪತ್ರೆಯ ನೊಂದಣಿ ವಿಭಾಗದಲ್ಲಿಯೂ ಸಹ ಅಂಟಿಸಲಾಗಿದೆ. ಅದರು ಕೆಲವರು ದಾಖಲೆಗಳನ್ನು ತೆಗೆದುಕೊಂಡು ಬಂದಿರುವುದಿಲ್ಲ. ಜಾತಿ ಪ್ರಮಾಣ ಪತ್ರ ತಮ್ಮ ಬಳಿ ಲಭ್ಯವಿದ್ದರೂ ಸಹ ಅದನ್ನು ಜೆರಾಕ್ಸ್ ಮಾಡಿಸಿಕೊಂಡು ಬರುವಷ್ಟರಲ್ಲಿ ವೈದ್ಯರುಗಳು ವಿಭಾಗದ ಕಾರ್ಯಕ್ಕೆ ತೆರಳಿರುತ್ತಾರೆ. ಇದರಿಂದಾಗಿ ರೋಗಿಗಳಿಗೆ ನಿಗದಿತ ಸಮಯದಲ್ಲಿ ಚಿಕಿತ್ಸೆ ನೀಡಲು ತೊಂದರೆ ಉಂಟಾಗುತ್ತಿರುತ್ತದೆ.

ಜೆರಾಕ್ಸ್ ಪ್ರತಿಯನ್ನು ಪಡೆಯಬೇಕೆಂದರೆ ರಿಮ್ಸ್ ಬೋಧಕ ಆಸ್ಪತ್ರೆಯಿಂದ ಸುಮಾರು 2 ಕೀ.ಲೋ ಮೀಟರ್ ದೂರ ಹೋಗಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿ ಜೆರಾಕ್ಸ್ ಮಳಿಗೆಯನ್ನು ಪ್ರಾರಂಭಿಸಿದಲ್ಲಿ ಆಸ್ಪತ್ರೆಯ ಹಿತದೃಷ್ಟಿಯಿಂದ ಸಾರ್ವಜನಿಕರು, ರೋಗಿಗಳಿಗೆ ತುಂಬಾ ಅನುಕೂಲವಾಗುವುದಲ್ಲದೇ ಓರ್ವ ಅಂಗವಿಕಲನಿಗೆ ಜೀವನಕ್ಕೆ ಆಧಾರವನ್ನು ಕಲ್ಪಿಸಿದಂತಾಗುತ್ತದೆ.



Director
RIMS, Raichur

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿ ಅಂಗವಿಕಲ ಅಭ್ಯರ್ಥಿಯಿಂದ ಜೆರಾಕ್ಸ್ ಮಳಿಗೆಯನ್ನು ಪ್ರಾರಂಭಿಸಲು ಅನುಮತಿಯನ್ನು ನೀಡುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿ ಅಂಗವಿಕಲ ಅಭ್ಯರ್ಥಿಯಿಂದ ಜೆರಾಕ್ಸ್ ಮಳಿಗೆಯನ್ನು ಪ್ರಾರಂಭಿಸುವ ಸಂಬಂಧ ನಿಯಮಾನುಸಾರ ಹಲವು ಷರತ್ತುಗಳನ್ನು ವಿಧಿಸಿ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 32 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಅಲ್ಟ್ರಾಸೌಂಡ್ ಮತ್ತು ಕಲರ್ ಡಾಪುಲರ್ ಉಪಕರಣವನ್ನು ನಿಯಮಾನುಸಾರ ಖರೀದಿಸಲು ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ರೋಗಿಗಳು ಕಿಡ್ನಿಯಲ್ಲಿ ಹರಳು / ಕಲ್ಲುಗಳು ಉತ್ಪತ್ತಿಯಾದ ಸಂಧರ್ಭದಲ್ಲಿ ಹರಳು / ಕಲ್ಲುಗಳನ್ನು ತೆಗೆಯಲು ಯುರೋಲಜಿ, ಪಿಡಿಯಾಟ್ರಿಕ್ ಸರ್ಜರಿ ಮತ್ತು ಪ್ಲಾಸ್ಟಿಕ್ ಸರ್ಜರಿ ವಿಭಾಗಗಕ್ಕೆ ಅಲ್ಟ್ರಾಸೌಂಡ್ ಮತ್ತು ಕಲರ್ ಡಾಪುಲರ್ ಉಪಕರಣದ ಅವಶ್ಯಕತೆಯಿರುವುದಾಗಿ ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ಕೋರಿರುತ್ತಾರೆ. ಸದರಿ ಉಪಕರಣದ ಬೆಲೆ ಅಂದಾಜು ರೂ. 17.00 ಲಕ್ಷಗಳು ಆಗುವ ಸಾಧ್ಯತೆಯಿರುತ್ತದೆ.

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಲೆಕ್ಕ ಶೀರ್ಷಿಕೆ 2210-01-110-2-37-101 ಅಡಿಯಲ್ಲಿ ಕಾಲಕಾಲಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಈ ಲೆಕ್ಕ ಶಿರ್ಷಿಕೆಯಲ್ಲಿ ಸದರಿ ಉಪಕರಣದ ಖರೀದಿಗೆ ಬೇಕಾದ ಅಂದಾಜು ರೂ. 17.00 ಲಕ್ಷಗಳ ಅನುದಾನವು ಲಭ್ಯವಿರುತ್ತದೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಯುರೋಲಜಿ, ಪಿಡಿಯಾಟ್ರಿಕ್ ಸರ್ಜರಿ ಮತ್ತು ಪ್ಲಾಸ್ಟಿಕ್ ಸರ್ಜರಿ ವಿಭಾಗಗಕ್ಕೆ ಅವಶ್ಯವಿರುವ ಅಲ್ಟ್ರಾಸೌಂಡ್ ಮತ್ತು ಕಲರ್ ಡಾಪುಲರ್ ಉಪಕರಣವನ್ನು ನಿಯಮಾನುಸಾರ ಖರೀದಿಸಲು ಟೆಂಡರ್ ಆಹ್ವಾನಿಸಲು ಖರೀದಿಸಲು ಹಾಗೂ ಈ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210-01-110-2-37-101 ಅಡಿಯಲ್ಲಿ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಯುರೋಲಜಿ, ಪಿಡಿಯಾಟ್ರಿಕ್ ಸರ್ಜರಿ ಮತ್ತು ಪ್ಲಾಸ್ಟಿಕ್ ಸರ್ಜರಿ ವಿಭಾಗಗಕ್ಕೆ ಅವಶ್ಯವಿರುವ ಅಲ್ಟ್ರಾಸೌಂಡ್ ಮತ್ತು ಕಲರ್ ಡಾಪುಲರ್ ಉಪಕರಣವನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಖರೀದಿಸಲು ಹಾಗೂ ಈ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210-01-110-2-37-101 ಅಡಿಯಲ್ಲಿ ಭರಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಓಪೆಕ್ ಆಸ್ಪತ್ರೆಗೆ ವರ್ಷವಾರು ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಗಿನಂತಿದೆ.

| Sl. No | Year | G.O.No. | Head of Account | Purpose | Grant Released | Expenditure | Balance |
|---|---|---|---|---|---|---|---|
| 1 | 2012-13 | HFW188MME2012 Dtd.25.09.12 | 2210-01-110-2-37-101 (Plan) | Salary & OE | 10000000.00 | 6272000.00 | 3728000.00 |
| | | | | | **10000000.00** | **6272000.00** | **3728000.00** |
| 2 | 2013-14 | HFW138MSF 2011 (Part-2) Dtd.28.01.2014 | 2210-01-110-2-37-101 (Plan) | Repair Works | 17500000.00 | 16316000.00 | 1184000.00 |
| | | HFW 227 MME 2013 Dtd.06.03.2014 | | Equipments | 51750000.00 | 66347000.00 | 16153000.00 |
| | | HFW 227 MME 2013 Dtd.10.03.2014 | | Equipments | 30750000.00 | | |
| | | | | | **100000000.00** | **82663000.00** | **17337000.00** |



Director
RIMS, Raichur

| | | | | | | | |
|---|---|---|---|---|---|---|---|
| 3 | 2014-15 | HFW 228 MME 2013 Dtd.13.08.2014 | 2210-01-110-2-37-101 (Plan) | Equipment | 28250000.00 | 0.00 | |
| | | HFW 171 MPS 2014 Dtd.06.06.2014 | | Salary & OE | 37500000.00 | 24114000.00 | 88386000.00 |
| | | HFW 171 MPS 2014 Dtd.18.08.2014 | | Salary & OE | 37500000.00 | | |
| | | HFW 171 MPS 2014 Dtd.10.11.2014 | | Salary & OE | 37500000.00 | | |
| | | | | | **140750000.00** | **24114000.00** | **88386000.00** |
| 4 | 2015-16 | HFW 152 MSF 2015 Dtd.05.06.2015 | 2210-01-110-2-37-101 (Plan) | Salary& OE | 22625000.00 | 45380000.00 | 22495000.00 |
| | | HFW 152 MSF 2015 Dtd.21.10.2015 | | Salary& OE | 22625000.00 | | |
| | | HFW 152 MSF 2015 Dtd.2912.2015 | | Salary& OE | 22625000.00 | | |
| | | | | | **67875000.00** | **45380000.00** | **22495000.00** |
| 5 | 2016-17 | HFW 102 MSF 2015 Dtd.22.08.2016 | 2210-01-110-2-37-101 (Plan) | Salary& OE | 9050000.00 | 17834000.00 | 266000.00 |
| | | HFW 102 MSF 2015 Dtd.03.11.2016 | | Salary& OE | 4525000.00 | | |
| | | HFW 102 MSF 2015 Dtd.21.01.2017 | | Salary& OE | 4525000.00 | | |
| | | | | | **18100000.00** | **17834000.00** | **266000.00** |
| 6 | 2017-18 | HFW 136 MSF 2017 Dtd.28.04.2017 | 2210-01-110-2-37-101 (Plan) | Salary& OE | 4300000.00 | 8600000.00 | 0.00 |
| | | HFW 136 MSF 2017 Dtd.01.07.2017 | | Salary& OE | 4300000.00 | | |
| | | | | | **8600000.00** | **8600000.00** | **0.00** |

| Sl. No | Year | G.O.No. | Head of Account | Purpose | Grant Released | Expenditure | Balance |
|---|---|---|---|---|---|---|---|
| 1 | 2016-17 | HFW 142 MSF 2016 (2) Dtd.30.12.2016 | 2210-01-110-2-37-102 (Plan) | Equipments | 82500000.00 | 0.00 | 0.00 |
| | | HFW 142 MME 2016 Dtd.21.02.2017 | | 2nd Phase upgradation | 27500000.00 | | |
| | | | | | **110000000.00** | **110000000.00** | **110000000.00** |
| 2 | 2017-18 | HFW 136 MSF 2017 Dtd.28.04.2017 | 2210-01-110-2-37-102 (Plan) | Equipments | 10325000.00 | 4746000.00 | 15904000.00 |
| | | HFW 136 MSF 2017 Dtd.01.07.2017 | | Equipments | 10325000.00 | | |
| | | | | | **20650000.00** | **4746000.00** | **15904000.00** |

| **Sl. No** | **Year** | **G.O.No.** | **Head of Account** | **Purpose** | **Grant Released** | **Expenditure** | **Balance** |
|---|---|---|---|---|---|---|---|
| 1 | 2016-17 | HFW 102 MSF 2015 Dtd.22.08.2016 | 2210-01-110-2-37-103 (Plan) | Gnl Exp | 29300000.00 | 36468000.00 | 22132000.00 |
| | | HFW 102 MSF 2015 Dtd.03.11.2016 | | Gnl Exp | 14650000.00 | | |
| | | HFW 102 MSF 2015 Dtd.21.01.2017 | | Gnl Exp | 14650000.00 | | |
| | | | | | **58600000.00** | **36468000.00** | **22132000.00** |
| 2 | 2017-18 | HFW 136 MSF 2017 Dtd.28.04.2017 | 2210-01-110-2-37-103 | Gnl Exp | 16153000.00 | 17919000.00 | 14431000.00 |
| | | HFW 136 MSF 2017 Dtd.01.07.2017 | | Gnl Exp | 16153000.00 | | |
| | | | | | **32306000.00** | **17919000.00** | **14431000.00** |

Director
RIMS, Raichur

| ವಿಷಯ ಸೂಚಿ ಸಂಖ್ಯೆ – 33 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸ್ಟೈಫೆಂಡ್ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಸ್ಟೈಫೆಂಡ್ ವೇತನವನ್ನು ಹೆಚ್ಚಿಸುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಹಲವು ಬೋಧಕೇತರ ಸಿಬ್ಬಂದಿ ಹುದ್ದೆಗಳು ಖಾಲಿಯಿದ್ದರಿಂದ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ನಿರ್ವಹಣೆಗಾಗಿ ಈ ಕೆಳಕಂಡಂತೆ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಸ್ಟೈಫೆಂಡ್ ವೇತನದ ಆಧಾರದ ಮೇಲೆ ಒಟ್ಟು 75 ಬೋದಕೇತರ ಸಿಬ್ಬಂದಿಗಳನ್ನು ವಿವಿಧ ಹುದ್ದೆಗಳಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಸದರಿ ಸಿಬ್ಬಂದಿಗಳಿಗೆ 17ನೇ ಆಡಳಿತ ಮಂಡಳಿಯಲ್ಲಿ ಸೂಚಿಸಿದಂತೆ ಪ್ರತಿ ಸಿಬ್ಬಂದಿಗೆ ರೂ. 8,000/– ಗಳ ಸ್ಟೈಫೆಂಡ್ ವೇತನವನ್ನು ನಿಗದಿಪಡಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ಹುದ್ದೆಯ ವಿವರ | ಸ್ಟೈಪೆಂಡ್ ವೇತನದ ಮೇಲೆ ನೇಮಕಾತಿಯಾದ ಸಿಬ್ಬಂದಿಗಳ ಸಂಖ್ಯೆ | ಪ್ರಸ್ತುತ ಪಾವತಿಸಲಾಗುತ್ತಿರುವ ಸ್ಟೈಪೆಂಡ್ ವೇತನ | ಹೆಚ್ಚಿಸಬೇಕಾಗಿರುವ ಸ್ಟೈಪೆಂಡ್ ವೇತನ | ವ್ಯತ್ಯಾಸದ ಮೊತ್ತ ಪ್ರತಿ ಸಿಬ್ಬಂದಿಗೆ ಪ್ರತಿ ತಿಂಗಳಿಗೆ | ಒಟ್ಟು ಸಿಬ್ಬಂದಿಗೆ ಪ್ರತಿ ತಿಂಗಳು ತಗುಲುವ ವೆಚ್ಚ |
|---|---|---|---|---|---|---|
| 01 | ಶುಶ್ರೂಷಕರು | 36 | ರೂ. 8000/– | ರೂ. 10,000/– | ರೂ. 2,000/– | ರೂ. 1,50,000/– |
| 02 | ಪ್ರಯೋಗಶಾಲ ತಂತ್ರಜ್ಞರು | 31 | | | | |
| 03 | ಎಂ.ಎಸ್.ಡಬ್ಲ್ಯೂ | 03 | | | | |
| 04 | ಹೆಲ್ತ್ ಇನ್ಸ್‌ಪೆಕ್ಟರ್ | 03 | | | | |
| 05 | ಅಸಿಸ್ಟೆಂಟ್ ಲೈಬ್ರರಿಯನ್ | 01 | | | | |
| 06 | ಅಟೆಂಡರ್ | 01 | | | | |
| ಒಟ್ಟು ಹುದ್ದೆಗಳು | | 75 | | | | |

ದಿನಾಂಕ 04.12.2016 ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭೇಟಿ ನೀಡಿದ ಸಮಯದಲ್ಲಿ ರಿಮ್ಸ್ ಸಂಸ್ಥೆಯಲ್ಲಿ ಸ್ಟೈಫೆಂಡ್ ಆಧಾರದ ಮೇಲೆ ಕಾರ್ಯನಿರ್ವಹಿಸುವ ಬೋಧಕೇತರ ಸಿಬ್ಬಂದಿಗಳಿಗೆ ಸ್ಟೈಫೆಂಡ್ ವೇತನವನ್ನು ರೂ. 8,000/– ಗಳಿಂದ ರೂ. 10,000/– ಗಳಿಗೆ ಹೆಚ್ಚಿಸುವಂತೆ ಸೂಚಿಸಿರುತ್ತಾರೆ. ಸದರಿ ಸಿಬ್ಬಂದಿಗಳಿಗೆ ಹೆಚ್ಚುವರಿಯಾಗುವ ಸ್ಟೈಪೆಂಡ್ ವೇತನದ ಮೊತ್ತವನ್ನು ಸರ್ಕಾರವು ಕಾಲಕಾಲಕ್ಕೆ ಬಿಡುಗಡೆ ಮಾಡುವ ವೇತನ ಹಾಗೂ ಇತರ ವೆಚ್ಚದಿಂದ ಭರಿಸಲಾಗುವುದು.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸ್ಟೈಫೆಂಡ್ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಸ್ಟೈಫೆಂಡ್ ವೇತನವನ್ನು ರೂ. 8,000/– ಗಳಿಂದ ರೂ. 10,000/– ಗಳಿಗೆ ಹೆಚ್ಚಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಈಗಾಗಲೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಶುಶ್ರೂಷಕರು ನೇಮಕಾತಿ ಹೊಂದಿ ಸಂಸ್ಥೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದರಿಂದ, 36 ಶುಶ್ರೂಷಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಸೂಚಿಸಲಾಯಿತು. ಹಾಗೂ 31 ಪ್ರಯೋಗಶಾಲ ತಂತ್ರಜ್ಞರು, 03 ಎಂ.ಎಸ್.ಡಬ್ಲ್ಯೂ, 01 – ಹೆಲ್ತ್ ಇನ್ಸ್‌ಪೆಕ್ಟರ್, 01 – ಅಸಿಸ್ಟೆಂಟ್ ಲೈಬ್ರರಿಯನ್ ಮತ್ತು ಓರ್ವ ಅಟೆಂಡರ್‌ಗೆ ಸ್ಟೈಫೆಂಡ್ ವೇತನವನ್ನು ರೂ. 8,000/– ಗಳಿಂದ ರೂ. 10,000/– ಗಳಿಗೆ ಹೆಚ್ಚಿಸಲು ಆರ್ಥಿಕ ಸಮಿತಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

Director
RIMS, Raichur

| ವಿಷಯ ಸೂಚಿ ಸಂಖ್ಯೆ – 34 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು |
|---|---|

ಅಧ್ಯಕ್ಷರ ಅಪ್ಪಣೆ ಮೇರೆಗೆ ಯಾವುದೇ ವಿಷಯಗಳು ಚರ್ಚೆಯಾಗದೇ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಡಾ.ಕವಿತಾ ಪಾಟೀಲ್),
ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

(ವಿ.ಮಂಜುಲ), ಭಾ.ಆ.ಸೇ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಬೆಂಗಳೂರು